ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 73 RNI Number : KNKAN/25/A2770 22-03-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :73 ರಾಯಚೂರು 22-03-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563


ಸೋಮವಾರದಿಂದ ರಾಜ್ಯಗಳಿಗೆ ಹೆಚ್ಚುವರಿ ಸಿಲಿಂಡರ್-ಮೋದಿ

ದೆಹಲಿ, ಮಾ.21-

ಕಳೆದ ಕೆಲವು ದಿನಗಳಿಂದ ಎಲ್‌ಪಿಜಿ () ಕೊರತೆಯಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದ ಹೋಟೆಲ್, ರೆಸ್ಟೋರೆಂಟ್ ಮತ್ತು ಆಹಾರ ಸಂಸ್ಕರಣಾ ಘಟಕಗಳಿಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಮಹತ್ವದ ಸಮಾಧಾನ ನೀಡಿದೆ. ರಾಜ್ಯಗಳಿಗೆ ಹೆಚ್ಚುವರಿಯಾಗಿ ಶೇ. 20ರಷ್ಟು ಅನಿಲ ಹಂಚಿಕೆ ಮಾಡಲು ನಿರ್ಧರಿಸಲಾಗಿದ್ದು, ಇದರಿಂದ ಒಟ್ಟು ಹಂಚಿಕೆ ಪ್ರಮಾಣ ಶೇಕಾಡ. ಶೇಕಾಡ 50ರ ಮಟ್ಟಕ್ಕೆ ತಲುಪಲಿದೆ. ಮಾರ್ಚ್ 23, 2026ರಿಂದ (ಸೋಮವಾರ) ಜಾರಿಗೆ ಬರುವಂತೆ ರಾಜ್ಯಗಳಿಗೆ ಹೆಚ್ಚುವರಿ ಶೇ. 20ರಷ್ಟು ಹಂಚಿಕೆ ಮಾಡಲಾಗುವುದು. ಮುಂದಿನ ಆದೇಶದವರೆಗೆ ಈ ವ್ಯವಸ್ಥೆ ಜಾರಿಯಲ್ಲಿರುತ್ತದೆ.

ಈ ಹೆಚ್ಚುವರಿ ಅನಿಲವನ್ನು ಪ್ರಮುಖವಾಗಿ ರೆಸ್ಟೋರೆಂಟ್, ಧಾಬಾ, ಹೋಟೆಲ್, ಕೈಗಾರಿಕಾ ಕ್ಯಾಂಟೀನ್, ಆಹಾರ ಸಂಸ್ಕರಣೆ ಮತ್ತು ಡೈರಿ ಕ್ಷೇತ್ರಗಳಿಗೆ ಆದ್ಯತೆಯ ಮೇಲೆ ನೀಡಲು ಸೂಚಿಸಲಾಗಿದೆ. ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳು ನಡೆಸುವ ಸಬ್ಸಿಡಿ ಊಟದ ಕೇಂದ್ರಗಳು ಮತ್ತು ಸಮುದಾಯ ಅಡುಗೆ ಮನೆಗಳಿಗೆ () ತಡೆರಹಿತ ಪೂರೈಕೆಗೆ ಕ್ರಮ ಕೈಗೊಳ್ಳಲಾಗಿದೆ.

ವಲಸೆ ಕಾರ್ಮಿಕರ ಹಿತದೃಷ್ಟಿಯಿಂದ ಅವರಿಗೆ 5 ಕೆಜಿ



ಸಣ್ಣ ಸಿಲಿಂಡರ್ () ಒದಗಿಸುವ ವಿಶೇಷ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಹೆಚ್ಚುವರಿ ಅನುದಾನವು ಕೇವಲ ನಿಗದಿಪಡಿಸಿದ ವಲಯಗಳಿಗೆ ತಲುಪುವಂತೆ ನೋಡಿಕೊಳ್ಳಲು ಮತ್ತು ಕಾಳಸಂತೆ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಪೆಟ್ರೋಲಿಯಂ ಇಲಾಖೆ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಜೀವಾವಧಿ ಶಿಕ್ಷೆಗೆ ಗುರಿಯಾದ ವ್ಯಕ್ತಿಯನ್ನು 20 ವರ್ಷಗಳ ಬಳಿಕ ಬಿಡುಗಡೆ ಮಾಡಬೇಕು ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ : ಹೈಕೋರ್ಟ್

ಬೆಂಗಳೂರು,ಮಾ.21-

ಅಪರಾಧಿಗೆ ಜೀವಾವಧಿ ಶಿಕ್ಷೆ ವಿಧಿಸುವ ಸಂದರ್ಭದಲ್ಲಿ, ಶಿಕ್ಷೆಯ ಅವಧಿಯ ಕುರಿತು ಯಾವುದೇ ಉಲ್ಲೇಖವಿಲ್ಲದ ಸಂದರ್ಭದಲ್ಲಿ 20 ವರ್ಷ ಜೈಲು ಶಿಕ್ಷೆ ಪೂರೈಸಿದ ಬಳಿಕ ಸ್ವಯಂಚಾಲಿತವಾಗಿ ಬಿಡುಗಡೆ ಮಾಡಬೇಕು ಎಂಬ ಪ್ರಶ್ನೆ ಉಂಟಾಗುವುದಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಮೈಸೂರು ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಬೆಂಗಳೂರಿನ ಕೋರಮಂಗಲದ ಕಿಶನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಅಲ್ಲದೇ, ಜೀವಾವಧಿ ಶಿಕ್ಷೆ ವಿಧಿಸುವ ಸಂದರ್ಭದಲ್ಲಿ ನ್ಯಾಯಾಲಯಗಳು ಶಿಕ್ಷೆಯ ಅವಧಿಯನ್ನು ನಿರ್ಬಂಧಿಸುವ ಸಂಬಂಧ ನ್ಯಾಯಾಲಯದಿಂದ ಯಾವುದೇ ನಿರ್ದಿಷ್ಟ ನಿರ್ದೇಶನವಿಲ್ಲದಿದ್ದಲ್ಲಿ, ಅದನ್ನು ಜೀವಿತಾವಧಿ ಶಿಕ್ಷೆ ಎಂದು ತಿಳಿದುಕೊಳ್ಳಬೇಕು. ಅಲ್ಲದೆ, ಅಪರಾಧಿಯು 20 ವರ್ಷ ಶಿಕ್ಷೆ ಪೂರೈಸಿದ ಬಳಿಕ ಜೀವಾವಧಿ ಶಿಕ್ಷೆಗೆ ಗುರಿಯಾದವನನ್ನು ಬಿಡುಗಡೆ ಮಾಡಬಹುದು ಎಂದು ಐಪಿಸಿ ಸೆಕ್ಷನ್ 57 ಹೇಳುವುದಿಲ್ಲ. ಆದರೆ, ಕ್ಷಮಾದಾನ ಅಥವಾ ಅವಧಿಗೂ ಮುನ್ನ ಅಪರಾಧಿಯನ್ನು ಬಿಡುಗಡೆ ಮಾಡುವ ಸಂಬಂಧ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಬಹುದಾಗಿದೆ ಎಂದು ಪೀಠ ಹೇಳಿದೆ.

ಕಾನೂನಿನ ಅಡಿ ಪರಿವರ್ತನೆ ಅಥವಾ ಕ್ಷಮಾದಾನ ಸಿಗದ ಹೊರತು, ಜೈಲು ಶಿಕ್ಷೆಯನ್ನು ಸೀಮಿತಗೊಳಿಸುವ ನಿರ್ದಿಷ್ಟ ನ್ಯಾಯಾಂಗ ನಿದೇರ್ಶನದ ಗೈರಿನ ಹಿನ್ನೆಲೆಯಲ್ಲಿ ಅರ್ಜಿದಾರರಿಗೆ ವಿಧಿಸಿರುವ ಜೀವಾವಧಿ ಶಿಕ್ಷೆಯನ್ನು ಬದುಕಿರುವವರೆಗಿನ ಶಿಕ್ಷೆ ಎಂದು ಪರಿಗಣಿಸಬೇಕಾಗುತ್ತದೆ ಎಂದು ಪೀಠ ತನ್ನ ಆದೇಶದಲ್ಲಿ ಹೇಳಿದೆ.

ಪ್ರಕರಣದಲ್ಲಿ ಅರ್ಜಿದಾರರಾಗಿರುವ ಅಪರಾಧಿ, 20 ವರ್ಷ ಜೈಲು ಶಿಕ್ಷೆ ಅನುಭವಿಸಿರುವುದರಿಂದ ಸರ್ಕಾರಕ್ಕೆ ಕ್ಷಮಾದಾನ ಕೋರಿಕೆ ಸಲ್ಲಿಸಲು ಅರ್ಹರಾಗಿದ್ದಾರೆ. ರಾಜ್ಯ ಸರ್ಕಾರ ಕ್ಷಮಾದಾನ ನೀತಿ ಮತ್ತು

ಮೂರನೇಯ ಪುಟಕ್ಕೆ

ನೀರಿನ ಬಿಲ್ ಬಾಕಿದಾರರಿಗೆ ಜಲಮಂಡಳಿ ಯುಗಾದಿ ಗಿಫ್ಟ್ : ಅಸಲು ಪಾವತಿಸಿದರೆ ಬಡ್ಡಿ ಮನ್ನಾ

ಬೆಂಗಳೂರು,ಮಾ.21-

ಕುಡಿಯುವ ನೀರಿನ ಬಿಲ್ ಬಾಕಿ ಉಳಿಸಿಕೊಂಡಿರುವ ನಗರದ ಜನರಿಗೆ ಜಲಮಂಡಳಿಯು ಭರ್ಜರಿ ಆಫರ್ ನೀಡಿದೆ. ಏಪ್ರಿಲ್‌ನಿಂದ ಜೂನ್ ತಿಂಗಳ ಒಳಗೆ ಮೂರು ತಿಂಗಳ ಅವಧಿಯಲ್ಲಿ ಬಾಕಿ ಉಳಿಸಿಕೊಂಡ ನೀರಿನ ಬಿಲ್ ಅಸಲು ಪಾವತಿಸಿದರೆ, ಅದರ ಬಡ್ಡಿ ಮನ್ನಾ ಮಾಡಲಾಗುತ್ತದೆ ಎಂದು ಜಲಮಂಡಳಿ ಘೋಷಿಸಿದೆ.

ಈ ಆಫರ್ ನಾಗರಿಕರಿಗೆ ಜಲಮಂಡಳಿಯು ನೀಡಿದ ಯುಗಾದಿ ಉಡುಗೊರೆಯಾಗಿದೆ ಎಂದು ಬೆಂಗಳೂರು ಉಸ್ತುವಾರಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ದೀರ್ಘಕಾಲದಿಂದ ನೀರಿನ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಗೆ ಅನುಕೂಲವಾಗಲು ಒನ್ ಟೈಮ್ ಸೆಟಲ್‌ಮೆಂಟ್ ಯೋಜನೆಯನ್ನು ಬರುವ ಏಪ್ರಿಲ್ ತಿಂಗಳಿನಿಂದ ಜಾರಿಗೊಳಿಸಲಾಗುತ್ತದೆ ಎಂದು ಡಿಸಿಎಂ ಮಾಹಿತಿ ನೀಡಿದ್ದಾರೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವ್ಯಾಪ್ತಿಯಲ್ಲಿರುವ ಸುಮಾರು 11 ಲಕ್ಷ ನೀರಿನ ಸಂಪರ್ಕಗಳ ಪೈಕಿ, 5.11 ಲಕ್ಷ



ಗ್ರಾಹಕರು ಕುಡಿಯುವ ನೀರಿನ ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ. 2026ರ ಫೆಬ್ರವರಿ ತಿಂಗಳ ಅಂತ್ಯದವರೆಗಿನ ಮಾಹಿತಿಯಂತೆ, ಒಟ್ಟು ಬಾಕಿ ಮೊತ್ತ 851.33 ಕೋಟಿ ರೂ.ಗಳಾಗಿವೆ. ಇದರಲ್ಲಿ ಅಸಲು ಮೊತ್ತ ರೂ. 539.43 ಕೋಟಿ ರೂ. ಹಾಗೂ ಬಡ್ಡಿ 311.90 ಕೋಟಿ ರೂ.ಸೇರಿದೆ. ನೀರಿನ ಬಿಲ್ ಕಟ್ಟದೇ ಬಾಕಿ ಉಳಿಸಿಕೊಂಡ ಜನರಿಗೆ ಅನುಕೂಲ ಮಾಡಿಕೊಡಲು ಬಿಲ್ ಅಸಲು ಪಾವತಿಸಿದಲ್ಲಿ 'ಒಟಿಎಸ್' ಯೋಜನೆಯಡಿ ಬಡ್ಡಿಯನ್ನು ಮನ್ನಾ ಮಾಡಲಾಗುವುದು ಎಂದು ಡಿಸಿಎಂ ಹೇಳಿದ್ದಾರೆ.

ಬಿಡಬ್ಲ್ಯೂಎಸ್‌ಎಸ್‌ಬಿ ಏಪ್ರಿಲ್‌ನಿಂದ ಜಾರಿಗೆ ತರಲಿರುವ ಒಟಿಎಸ್ ಯೋಜನೆಯ ಪ್ರಕಾರ, ನೀರಿನ ಬಿಲ್ ಮೆಲಿನ ಶೇ.100ರಷ್ಟು ಬಡ್ಡಿ ಮನ್ನಾ ಮಾಡಲಾಗುತ್ತದೆ. 3 ತಿಂಗಳು ಜಾರಿಯಲ್ಲಿರುವ ಯೋಜನೆ ಅವಧಿಯಲ್ಲಿ ಗ್ರಾಹಕರು ತಮ್ಮ ಅಸಲು ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿದರೆ, ಏಪ್ರಿಲ್ 2026ರವರೆಗೆ ಸಂಗ್ರಹವಾಗಿರುವ ಸಂಪೂರ್ಣ ಬಡ್ಡಿಯನ್ನು ರಿಬೇಟ್ ರೂಪದಲ್ಲಿ ಮನ್ನಾ ಮಾಡಲಾಗುತ್ತದೆ.

ಯಾರಿಗೆಲ್ಲಾ ಅನ್ವಯ?: ಈ ಯೋಜನೆಯು ಗೃಹ, ವಾಣಿಜ್ಯ, ಕೈಗಾರಿಕಾ ಸೇರಿದಂತೆ ಜಲಮಂಡಳಿಯ ಎಲ್ಲ ವರ್ಗದ ಗ್ರಾಹಕರಿಗೂ ಅನ್ವಯವಾಗಲಿದೆ. ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳ ಬಾಕಿಗಳಿಗೂ ಲೆಕ್ಕಪತ್ರ ಸಮನ್ವಯದ ಮೂಲಕ ಬಡ್ಡಿ ಮನ್ನಾ ಯೋಜನೆಯ ವ್ಯವಸ್ಥೆ ಕಲ್ಪಿಸಲಾಗುತ್ತದೆ.

ಪಾವತಿ ಪ್ರಕ್ರಿಯೆ ಹೇಗೆ?: ಗ್ರಾಹಕರಿಗೆ ಮಾಹಿತಿ ಒದಗಿಸುವ ಹಾಗೂ ಪಾವತಿ ಪ್ರಕ್ರಿಯೆಯನ್ನು ಅತ್ಯಂತ ಸರಳಗೊಳಿಸುವ ನಿಟ್ಟಿನಲ್ಲಿ, ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಪ್ರತಿ ಬಾಕಿದಾರರಿಗೆ ಅವರ ಆರ್‌ಆರ್ ಸಂಖ್ಯೆ, ಅಸಲು ಮೊತ್ತ, ಮನ್ನಾ ಆಗುವ ಬಡ್ಡಿ ಮೊತ್ತ ಹಾಗೂ ಪಾವತಿಸಬೇಕಾದ ಅಂತಿಮ ಮೊತ್ತದ ವಿವರಗಳನ್ನು ಒದಗಿಸಲಾಗುವುದು. ಗ್ರಾಹಕರು ಬಿಡಬ್ಲ್ಯೂಎಸ್‌ಎಸ್‌ಬಿ ಕಿಯೋಸ್ಕ್, ಆನ್‌ಲೈನ್ ಪೋರ್ಟಲ್ ಹಾಗೂ ವಿವಿಧ ಡಿಜಿಟಲ್ ಪಾವತಿ ವಿಧಾನಗಳ ಮೂಲಕ ಸುಲಭವಾಗಿ ಹಣ ಪಾವತಿಸಬಹುದು.

ಬೆಂಗಳೂರು ಮಹಾನಗರದ 5.11 ಲಕ್ಷಕ್ಕೂ ಹೆಚ್ಚು ಗ್ರಾಹಕರಿಗೆ ಆರ್ಥಿಕ ನೆರವು ನೀಡುವ ಹಾಗೂ ಮಂಡಳಿಯ ಆರ್ಥಿಕ ಸ್ಥಿತಿಯನ್ನು ಬಲಪಡಿಸುವ ದ್ವಿಮುಖ ಉದ್ದೇಶದಿಂದ ಈ ಯುಗಾದಿ ಕೊಡುಗೆಯನ್ನು ಜಾರಿಗೊಳಿಸಲಾಗುತ್ತಿದೆ. ಬರೋಬ್ಬರಿ 311 ಕೋಟಿ ರೂ.ಗಳ ಬಡ್ಡಿ ಮನ್ನಾ ಮಾಡುವ ಮೂಲಕ ನಾಗರಿಕರ ಮೇಲಿನ ಆರ್ಥಿಕ ಹೊರೆಯನ್ನು ಗಣನೀಯವಾಗಿ ಇಳಿಸಲಾಗುತ್ತಿದೆ. ಸಾರ್ವಜನಿಕರು ಈ ಯೋಜನೆಯ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಮನವಿ ಮಾಡಿದ್ದಾರೆ.

ದೇವರ ದಾಸಿಮಯ್ಯ ಜಯಂತಿ ಆಚರಣೆಗೆ ಸಜ್ಜು ನೇಕಾರ ಸಮುದಾಯಕ್ಕೆ ಆಹ್ವಾನ- ಜಿ. ನಾಗರಾಜ

ರಾಯಚೂರು,ಮಾ.21-

ಆದ್ಯ ವಚನಕಾರ ಹಾಗೂ ನೇಕಾರ ಸಂತ ಶ್ರೀ ದೇವರ ದಾಸಿಮಯ್ಯ ಅವರ ಜಯಂತಿಯನ್ನು ಭರ್ಜರಿಯಾಗಿ ಆಚರಿಸಲು ನಗರ ಸಜ್ಜಾಗಿದೆ. ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಜಿ. ನಾಗರಾಜ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜಕ್ಕೆ ಸಮಾನತೆ ಮತ್ತು ಶ್ರಮದ ಮೌಲ್ಯಗಳನ್ನು ಸಾರಿದ ದಾಸಿಮಯ್ಯನವರ ಸ್ಮರಣೆ ಇಂದಿಗೂ ಪ್ರಸ್ತುತವಾಗಿದೆ ಎಂದು ಹೇಳಿದರು.

ಮಾರ್ಚ್ 23ರಂದು ಬೆಳಿಗ್ಗೆ 9



ಗಂಟೆಗೆ ಜಿಲ್ಲಾಧಿಕಾರಿಗಳಿಂದ ಮೆರವಣಿಗೆ ಚಾಲನೆ ದೊರೆಯಲಿದ್ದು, 10 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಪೂಜೆ ಸಲ್ಲಿಸಿ, ಬಳಿಕ ಭವ್ಯ ಮೆರವಣಿಗೆ ರಂಗಮಂದಿರದವರೆಗೆ ಸಾಗಲಿದೆ. ಮೆರವಣಿಗೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾ ತಂಡಗಳು ಭಾಗವಹಿಸಲಿವೆ.

ನಂತರ ನಡೆಯುವ ಕಾರ್ಯಕ್ರಮವನ್ನು ಡಾ. ಶರಣಪ್ರಕಾಶ ಆರ್. ಪಾಟೀಲ ಉದ್ಘಾಟಿಸಲಿದ್ದು, ಎಸ್.ಎಸ್. ಬೋಸರಾಜು ಘನ ಉಪಸ್ಥಿತಿಯಾಗಿ ಪಾಲ್ಗೊಳ್ಳಲಿದ್ದಾರೆ. ಅಧ್ಯಕ್ಷತೆಯನ್ನು ಡಾ. ಎಸ್. ಶಿವರಾಜ್ ಪಾಟೀಲ್ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕರೆಮ್ಮ ಜಿ. ನಾಯಕ, ಶಶೀಲ್ ಜಿ. ನಮೋಷಿ, ಡಾ. ಚಂದ್ರಶೇಖರ ಬಿ. ಪಾಟೀಲ್ ಸೇರಿದಂತೆ ಹಲವಾರು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ರಿತೇಶಕುಮಾರ ಸಿಂಗ್ (ಅಪರ ಮುಖ್ಯ ಕಾರ್ಯದರ್ಶಿಗಳು), ಜಹೀರಾ ನಸೀಮ (ಪ್ರಾದೇಶಿಕ ಆಯುಕ್ತರು) ಭಾಗವಹಿಸಲಿದ್ದಾರೆ.

ಮೂರನೇಯ ಪುಟಕ್ಕೆ

ಈದ್ಗಾ ಮೈದಾನದಲ್ಲಿ ರಂಜಾನ್ ಸಂಭ್ರಮ ಸೌಹಾರ್ದತೆಗೆ ಸಂದೇಶ



ರಾಯಚೂರು,ಮಾ.21-

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಹಾಗೂ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ, ರಾಯಚೂರು ಮಹಾನಗರ ಪಾಲಿಕೆ ವತಿಯಿಂದ ರಂಜಾನ್ ಹಬ್ಬದ ಪ್ರಯುಕ್ತ ಮುಸ್ಲಿಂ ಭಾಂದವರಿಗಾಗಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿತ್ತು.

ನಗರದ ಅರಬ್ ಮೊಹಲ್ಲಾದಲ್ಲಿರುವ ಈದ್ಗಾ ಮೈದಾನದಲ್ಲಿ ರಂಜಾನ್ ಹಬ್ಬದ ಅಂಗವಾಗಿ ಬೆಳಿಗ್ಗೆ ನಡೆದ ಸಾಮೂಹಿಕ ನಮಾಜ್‌ನಲ್ಲಿ ಸಾವಿರಾರು ಜನರು ಭಾಗವಹಿಸಿ ದೇಶದ ಶಾಂತಿ, ಸೌಹಾರ್ದತೆ ಮತ್ತು ಸಮೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು, ಆಪ್ಪಿಕೊಳ್ಳುವ ಮೂಲಕ ಭ್ರಾತೃತ್ವದ ಸಂದೇಶ ಸಾರಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಧಾರ್ಮಿಕ ಮುಖಂಡರು, ರಂಜಾನ್ ಹಬ್ಬವು ತ್ಯಾಗ, ಸಹನೆ, ದಾನಧರ್ಮ ಹಾಗೂ ಮಾನವೀಯ ಮೌಲ್ಯಗಳನ್ನು ಸಾರುವ ಮಹತ್ವದ ಹಬ್ಬವಾಗಿದ್ದು, ಸಮಾಜದಲ್ಲಿ ಸೌಹಾರ್ದತೆ ಮತ್ತು ಸಹಬಾಳ್ವೆಯನ್ನು ಬಲಪಡಿಸುತ್ತದೆ ಎಂದು ಹೇಳಿದರು.

ನಗರದ ವಿವಿಧ ಭಾಗಗಳಿಂದ ಆಗಮಿಸಿದ ಜನರು ಉತ್ಸಾಹದಿಂದ ಪಾಲ್ಗೊಂಡು ಹಬ್ಬದ ಸಂಭ್ರಮ ಹಂಚಿಕೊಂಡರು. ವಿಶೇಷವಾಗಿ ಯುವಕರು ಹಾಗೂ ಮಹಿಳೆಯರ

ಮೂರನೇಯ ಪುಟಕ್ಕೆ



ಸಂಭ್ರಮದ ಈದುಲ್ ಫಿತ್ರ್ ಆಚರಣೆ

ಸಿಂಧನೂರು : ನಗರದ ಈದ್ಗಾ ಮೈದಾನದಲ್ಲಿ ಈದುಲ್ ಫಿತ್ರ್ ಪ್ರಯುಕ್ತ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ಶ್ರದ್ಧೆಭಕ್ತಿಯಿಂದ ಹಬ್ಬ ಆಚರಿಸಿದರು.

ಶನಿವಾರ ಬೆಳಿಗ್ಗೆ 9.30 ಗಂಟೆಗೆ ಈದ್ ಸಾಮೂಹಿಕ ಪ್ರಾರ್ಥನೆ ನರೆವೇರಿತು. ಬಳಿಕ ಸಮುದಾಯದವರು ಪರಸ್ಪರ ಆಲಿಂಗಿಸಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು.

ಈದ್ಗಾದ ಸಾಮೂಹಿಕ ಪ್ರಾರ್ಥನೆ ನಂತರ ನಗರ ಸೇರಿ ತಾಲ್ಲೂಕಿನ ವಿವಿಧ ಮಸ್ಜಿದ್ ಗಳಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಅಹಿತಕರ ಘಟನೆಗಳು ನಡೆಯದಂತೆ ಡಿವೈಎಸ್‌ಪಿ ಚಂದ್ರಶೇಖರ ಹಿರೇಮಠ ನೇತೃತ್ವದಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಮಾಡಿದ್ದರು.

ಮೂರನೇಯ ಪುಟಕ್ಕೆ

ಮಾ.25ರಂದು ಒಳ ಮೀಸಲಾತಿ ರಹಿತ ಹಳೆ ಮೀಸಲಾತಿಯ ಜಾರಿಗಾಗಿ ಸಮಾವೇಶಕ್ಕೆ ಜಿಲ್ಲೆಯಿಂದ 10 ಸಾವಿರ ಜನ - ಜಗನ್ನಾಥ ಸುಂಕಾರಿ



ಸಿರವಾರ.ಮಾ.21-

ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ ರಾಜ್ಯ ಸಮಿತಿ ವತಿಯಿಂದ ಒಳಮೀಸಲಾತಿ ರಹಿತ ಹಳೆಯ ಮೀಸಲಾತಿ ಜಾರಿಗಾಗಿ ಆಗ್ರಹಿಸಿ ಮಾರ್ಚ್ 25, 2026ರಂದು ಬೃಹತ್ ಪ್ರತಿಭಟನಾ ಸಮಾವೇಶ ವನ್ನು ಹಮ್ಮಿಕೊಳ್ಳಲಾಗಿದೆ, ಜಿಲ್ಲೆಯಿಂದ ಸುಮಾರು 10 ಸಾವಿರ ಜನ ಭಾಗವಹಿಸುವ ಸಾಧ್ಯತೆ ಇದೆ ಒಕ್ಕೂಟದ ಜಿಲ್ಲಾ ಸಂಚಾಲಕರಾದ ಜಗನ್ನಾಥ ಸುಂಕಾರಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ಸಭೆಯಲ್ಲಿ ಮಾತನಾಡಿ ಅವರು ಮಾರ್ಚ್ 25ರಂದು ಬೆಳಿಗ್ಗೆ 11 ಗಂಟೆಗೆ ಬೆಂಗ ಳೂರು ನಗರದ ಫ್ರೀಡಂ ಪಾರ್ಕ್‌ನಲ್ಲಿ

ವಿವಿಧ ಬೇಡಿಕೆಗಳನ್ನು ಈಡೇರಿಸು ವಂತೆ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದ್ದು ನ್ಯಾಯಮೂರ್ತಿ ನಾಗಮಹಂದಾಸ್ ರವರು ಸಮೀಕ್ಷೆ ಯನ್ನು ಪೂರ್ಣ ಪ್ರಮಾಣದಲ್ಲಿ ನಡೆಸದೆ ಸರ್ವೋಚ್ಚ ನ್ಯಾಯಾಲ ಯದ ಆದೇಶದಂತೆ ಅಗತ್ಯ ಅಂಕಿ ಅಂಶಗಳನ್ನು ಕ್ರೂಢೀಕರಿಸದೆ ಒಂದು ಜಾತಿಯನ್ನು ಒಲೈಸಲು ಪರಿಶಿಷ್ಟ ಜಾತಿಯ ಬಲಗೈ ಸಮುದಾಯದ ಜನಸಂಖ್ಯೆಯನ್ನು 04 ಭಾಗಗಳಾಗಿ ವಿಂಗಡಣೆ ಮಾಡಿ ಸರ್ಕಾರದ ನಿಬಂಧನೆಗಳಿಗೆ ವಿರುದ್ಧ ವಾಗಿ ಮಾಡಿದ್ದು ಹಾಗೂ ಭಾರತದ ಸರ್ವೋರ್ಚ ನ್ಯಾಯಾ ಲಯವು 01.08.20 24ರಂದು ನೀಡಿದ ತೀರ್ಪಿನನ್ವಯ ಒಳಮೀಸ ಲಾತಿ ನೀಡುವ ಅಧಿಕಾರ ರಾಜ್ಯಗಳಿಗೆ ಇದ್ದರೂ,

ಅದು ಸಮಗ್ರ ಹಾಗೂ ಖಚಿತ ಅಂಕಿಅಂಶಗಳ ಆಧಾರದ ಮೇಲೆ ಮಾತ್ರ ನೀಡಬೇಕೆಂದು ಸ್ಪಷ್ಟಪಡಿಸಿದೆ. ಆದರೆ ಕರ್ನಾಟಕ ಸರ್ಕಾರವು ನ್ಯಾಯಮೂರ್ತಿ ನಾಗ ಮೋಹನ್ ದಾಸ್ ಅವರ ನೇತೃತ್ವದ ಏಕ ಸದಸ್ಯ ಆಯೋಗದ ವರದಿ ಆಧಾರವಾಗಿ ಕೈಗೊಂಡ ಕ್ರಮಗಳು ಪರಿಶಿಷ್ಟ ಜಾತಿ

ಮೂರನೇಯ ಪುಟಕ್ಕೆ

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ-2026

ಚುನಾವಣಾ ನೋಡಲ್ ಅಧಿಕಾರಿಗಳೊಂದಿಗೆ ಸಾಮಾನ್ಯ ವೀಕ್ಷಕರ ಸಭೆ



ಬಾಗಲಕೋಟೆ,ಮಾ.21-

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ಹಿನ್ನಲೆಯಲ್ಲಿ ಜಿಲ್ಲೆಗೆ ಆಗಮಿಸಿದ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ಅವರ ಅಧ್ಯಕ್ಷತೆಯಲ್ಲಿ ಚುನಾವಣಾ ನೋಡಲ್ ಅಧಿಕಾರಿಗಳೊಂದಿಗೆ ಶುಕ್ರವಾರ ಸಭೆ ಜರುಗಿತು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ವಿವಿಧ ನೋಡಲ್ ಅಧಿಕಾರಿಗಳ ಕಾರ್ಯ, ಮಾದರಿ ನೀತಿ ಸಂಹಿತೆ ಜಾರಿಗೆ ಸಂಬಂಧಿಸಿದ ಕ್ರಮಗಳು, ಮತದಾರರ ಸೌಲಭ್ಯಗಳು ಹಾಗೂ ಮತಟ್ಟೆಗಳಲ್ಲಿ ಕೈಗೊಳ್ಳಬೇಕಾದ ಸಿದ್ದತೆಗಳ ಬಗ್ಗೆ ವಿವರವಾಗಿ ಚರ್ಚೆ ನಡೆಸಿದರು. ಎಲ್ಲ ನೋಡಲ್ ಅಧಿಕಾರಿಗಳು ತಮ್ಮ ತಮ್ಮ ಜವಾಬ್ದಾರಿಗಳನ್ನು ಸಮಪಕವಾಗಿ ನಿರ್ವಹಿಸಿ, ಚುನಾವಣೆಯನ್ನು ಪಾರದರ್ಶಕ ಹಾಗೂ ನಿಷ್ಪಕ್ಷಪಾತವಾಗಿ ನಡೆಸುವಂತೆ ಸಾಮಾನ್ಯ ವೀಕ್ಷಕರು ಸೂಚಿಸಿದರು.

ಈವರೆಗೆ ಕೈಗೊಂಡ ಚುನಾವಣಾ ಪೂರ್ವ ಸಿದ್ದತೆ, ಮಾದರಿ ನೀತಿ ಸಂಹಿತೆ, ಕಾನೂನು ಸುವ್ಯಸ್ಥೆ, ಮತಯಂತ್ರಗಳ ಪೂರ್ವಸಿದ್ದತೆ, ಮತದಾರರ ಪಟ್ಟಿ ಪರಿಷ್ಕರಣೆ, ಮತಗಟ್ಟೆ ಸಿಬ್ಬಂದಿ ನಿಯೋಜನೆ, ಜಾಗೃತ ದಳದ ತಂಡಗಳ ನಿರ್ವಹಣೆ ಕುರಿತಂತೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಜಿಲ್ಲೆಯಲ್ಲಿ ನೀತಿ ಸಂಹಿತೆ ಪಾಲನೆ ಮಾಡುವದರ ಜೊತೆಗೆ ಅಧಿಕಾರಿಗಳು ಪಕ್ಷಾತೀತವಾಗಿ ಹಾಗೂ ಯಾರಿಗೂ ಸಂಶಯ ಬಾರದಂತೆ ಪ್ರಾಮಾಣಿಕವಾಗಿ ಕಾರ್ಯ ಮಾಡಬೇಕು. ಯಾವುದೇ ಸಮಸ್ಯೆಗಳಿದ್ದಲ್ಲಿ ಜಿಲ್ಲಾ ಚುನಾವಣಾಧಿಕಾರಿ ಹಾಗೂ ತಮ್ಮನ್ನು ನೇರವಾಗಿ ಸಂಪರ್ಕಿಸಬಹುದಾಗಿದೆ ಎಂದರು.

ಜಿಲ್ಲೆಯಲ್ಲಿರುವ ಅಬಕಾರಿ ಡಿಸ್ಟಿಲರಿಗಳ ಮೇಲೆ ಪ್ರತಿದಿನ ಉತ್ಪನ್ನಗಳ ಹಾಗೂ ಹೊರ ಸಾಗಾಟದ ಮೇಲೆ ತೀವ್ರ ನಿಗಾವಹಿಸಬೇಕು. ಬೇರೆ ಜಿಲ್ಲೆಗಳ ಬಾರ್ಡರಗಳಲ್ಲಿ ಅಬಕಾರಿ ಚೆಕ್‌ಪೋಸ್ಟಗಳನ್ನು ಸಹ ಹಾಕಲು ತಿಳಿಸಿದರು. ಕಾಸಿಗಾಗಿ ಸುದ್ದಿ, ಪೇಯಡ್ ನ್ಯೂಸ್, ಸೋಸಿಯಲ್ ಮೇಡಿಯಾ ಹಾಗೂ ಜಾಹೀರಾತುಗಳ ಮೇಲೆ ನಿಗಾವಹಿಸಿ, ವೆಚ್ಚ ವೀಕ್ಷಕರ ಗಮನಕ್ಕೆ ತರುವಂತೆ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ತಿಳಿಸಿದರು. ಕೇಬಲ್ ಟಿವಿ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಬರುವ ಜಾಹೀರಾತುಗಳ ಬಗ್ಗೆ ತೀವ್ರ ನಿಗಾವಹಿಸಂತೆ ಎಂಸಿಎಂಸಿ ಸಮಿತಿಗೆ ತಿಳಿಸಿದರು.

ಉಪ ಚುನಾವಣೆಗೆ ಸಂಬಂಧಿಸಿದ 319 ಮತಗಟ್ಟೆ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯಗಳು ಇರುವ ಹಾಗೆ ಕ್ರಮಕೈಗೊಳ್ಳಲಾಗಿದೆ. ಚುನಾವಣಾ ಸಿಬ್ಬಂದಿಗಳಿಗೆ ತರಬೇತಿ ಹಮ್ಮಿಕೊಳ್ಳಲಾಗಿದೆ. ಚುನಾವಣಾ ಅಕ್ರಮ ತಡೆಗೆ 24 ಚೆಕ್ ಪೋಸ್ಟಗಳನ್ನು ಹಾಗೂ 72 ಸ್ಟಾಟಿಕ್ ಸರ್ವೆಲನ್ಸ್ ತಂಡಗಳನ್ನು ರಚಿಸಲಾಗಿದೆ. ನೀತಿ ಸಂಹಿತೆ ಉಲ್ಲಂಘಿಸದಂತೆ ಎಲ್ಲ ರಾಜಕೀಯ ಪಕ್ಷಗಳಿಗೆ ಚುನಾವಣಾ ನೀತಿ ಸಂಹಿತೆ ಮಾಹಿತಿಯನ್ನು ನೀಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಅವರು ತಿಳಿಸಿದರು. ಈ ಸಂದರ್ಭದಲ್ಲಿ ವಿಶೇಷ ಮತಗಟ್ಟೆಗಳ ಸ್ಥಾಪನೆ ಬಗ್ಗೆ ಕ್ರಮೈಗೊಳ್ಳಲಾಗುತ್ತಿದೆ ಎಂದು ಜಿ.ಪಂ ಸಿಇಓ ಹಾಗೂ ಜಿಲ್ಲಾ ಎಂಸಿಸಿ ನೋಡಲ್ ಅಧಿಕಾರಿ ಶಶಿಧರ ಕುರೇರ ಸಭೆಗೆ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ಚುನಾವಣಾ ಎಲ್ಲ ನೋಡಲ್ ಅಧಿಕಾರಿಗಳು ಉಪಸ್ಥಿತರಿದ್ದರು.

24 ರಂದು ಉದ್ಯೋಗ ಮೇಳ ಆಯೋಜನೆ

ಕಲಬುರಗಿ,ಮಾ.21-

ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಇದೇ ಮಾರ್ಚ್ 24 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಕಲಬುರಗಿ ಸರ್ಕಾರಿ ಐಟಿಐ ಕಾಲೇಜು ಹಿಂದುಗಡೆಯಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಕಿರಣ ರೇಡಿಯೋ ಗ್ರಾಫಿಕ್‌ದಲ್ಲಿ ಫೀಲ್ಡ್ ಸರ್ವೀಸ್ ಇಂಜಿನಿಯರ್ ಹುದ್ದೆಗೆ ಐಟಿಐ/ ಡಿಪ್ಲೋಮಾ (ಇ ಇ/ ಬಯೋ ಮೆಡಿಕಲ್) ವಿದ್ಯಾರ್ಹತೆ ಹೊಂದಿರಬೇಕು. ವಯೋಮಿತಿ 18 ರಿಂದ 35 ವರ್ಷದೊಳಗಿರಬೇಕು.

ಝುಮ್‌ಟೇಕ್‌ದಲ್ಲಿ ವಿವಿಧ ಹುದ್ದೆಗಳಿಗೆ 7ನೇ, 10ನೇ, ಪಿಯುಸಿ / ಐಟಿಐ/ ಯಾವುದೇ ಪದವಿ ಪಾಸಾಗಿರಬೇಕು. ಅಕೌಂಟ್ ಎಕ್ಸಿಕ್ಯೂಟಿವ್ / ಎಚ್.ಆರ್. ಹುದ್ದೆಗೆ ಬಿ.ಕಾಂ., ಎಮ್.ಕಾಂ., ಬಿ.ಎಸ್.ಸಿ., ಎಮ್.ಎಸ್.ಸಿ., ಎಮ್.ಬಿ.ಎ. ವಿದ್ಯಾರ್ಹತೆ ಹೊಂದಿರಬೇಕು. ಟೆಕ್ನಿಷಿಯನ್ ಪಿಸಿಬಿ / ಲ್ಯಾಪ್‌ಟಾಪ್ ಚಿಪ್ ಹುದ್ದೆಗೆ ಬಿ.ಟೆಕ್/ ಡಿಪ್ಲೋಮಾ ಇಸಿಇ ವಿದ್ಯಾರ್ಹತೆ ಹೊಂದಿರಬೇಕು. ವಯೋಮಿತಿ 18 ರಿಂದ 35 ವರ್ಷದೊಳಗಿರಬೇಕು.

ಸುಬ್ಬಲಕ್ಷ್ಮಿ ಕರಿಯರ್ ಸಲ್ಯೂಶನ್‌ದಲ್ಲಿ ಗಣಿತ / ವಿಜ್ಞಾನ /ಇಂಗ್ಲೀಷ / ಸಮಾಜ ವಿಜ್ಞಾನ / ಬಯೋಲಾಜಿ, ಫಿಜಿಕ್ಸ್ , ಗಣಿತ (ಪಿಯುಸಿ) ಮದರ್ ಟೀಚರ್, ದೈಹಿಕ ಶಿಕ್ಷಕರು, ಡ್ರಾಯಿಂಗ್ ಟೀಚರ್ ಹುದ್ದೆಗಳಿಗೆ ಯಾವುದೇ ಪದವಿ ಜೊತೆಗೆ ಬಿ.ಎಡ್. ವಿದ್ಯಾರ್ಹತೆ ಹೊಂದಿರಬೇಕು. ಕೋ-ಆಡಿನೇಟರ್, ಸಹಾಯಕ ಕೋ-ಆಡಿನೇಟರ್ ಗ್ರಂಥಪಾಲಕರು ಹುದ್ದೆಗೆ ಯಾವುದೇ ಪದವಿ ಪಾಸಾಗಿರಬೇಕು. ವಯೋಮಿತಿ 18 ರಿಂದ 30 ವರ್ಷದೊಳಗಿರಬೇಕು. ಪಿ.ಎನ್.ಎಸ್. ಚೈನ್ ಸಪ್ಲೈ ಸಲ್ಯೂಶನ್‌ದಲ್ಲಿ ಟೆಕ್ನಿಕಲ್ ಅಸಿಸ್ಟೆಂಟ್ / ಆಪರೇಟರ್ ಹುದ್ದೆಗೆ 10ನೇ/ ಪಿಯುಸಿ / ಐಟಿಐ/ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರಬೇಕು. ವಯೋಮಿತಿ 18 ರಿಂದ 30 ವರ್ಷದೊಳಗಿರಬೇಕು. ಮುತ್ತೂಟ್ ಫೈನಾನ್ಸ್ ದಲ್ಲಿ ಇಂಟರ್ನ್ ಅಸೋಸಿಯೇಟ್ಸ್ ಹುದ್ದೆಗೆ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರಬೇಕು. ವಯೋಮಿತಿ 18 ರಿಂದ 25 ವರ್ಷದೊಳಗಿರಬೇಕು.

ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ವಿದ್ಯಾಭ್ಯಾಸದ ಎಲ್ಲಾ ಅಂಕಪಟ್ಟಿಗಳ ಝೆರಾಕ್ಸ್ , ರೆಸ್ಯೂಮ್ (ಬಯೋಡೆಟಾ) ಭಾವಚಿತ್ರಗಳು ಹಾಗೂ ಆಧಾರ್‌ಕಾರ್ಡ್‌ದೊಂದಿಗೆ ಮೇಲ್ಕಂಡ ದಿನದಂದು ನಡೆಯುವ ಉದ್ಯೋಗ ಮೇಳದಲ್ಲಿ ಭಾಗವಹಿಸಬೇಕು. ಉದ್ಯೋಗ ಮೇಳದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಯಾವುದೇ ತರಹದ ಭತ್ಯೆಯನ್ನು ನೀಡಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472-274846, ಮೊಬೈಲ್ ಸಂಖ್ಯೆ 9036069143 ಗೆ ಸಂಪರ್ಕಿಸಲು ಕೋರಲಾಗಿದೆ.



ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಕಿರುಕುಳ ತಡೆಯಲು ಸಮಿತಿಗಳ ರಚನೆ

ಯಾದಗಿರಿ,ಮಾ.21-

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಹಾಗೂ ನಿವಾರಿಸುವಿಕೆ) ಅಧಿನಿಯಮ 2013ರಡಿ (ಕಣಖಿಖ ಅಇಖ) ಸಮಗ್ರ ಅನುಷ್ಠಾನ ಉಸ್ತುವಾರಿಗೆ ಜಿಲ್ಲಾ ಮಟ್ಟದ ,ತಾಲೂಕು ಮಟ್ಟದ, ಮಹಾನಗರ ಪಾಲಿಕೆ ವ್ಯಾಪ್ತಿಯ ಸಮನ್ವಯ ಸಮಿತಿ ರಚಿಸಿ, ಸರ್ಕಾರ ಆದೇಶ ಹೊರಡಿಸಿದ್ದು, ಅದರನ್ವಯ ಜಿಲ್ಲೆಯಲ್ಲಿ ಈ ಸಮಿತಿಗಳನ್ನು ರಚಿಸಲಾಯಿತು.

ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಈ ಸಮಿತಿಗಳನ್ನು ರಚಿಸಲಾಗಿದ್ದು, ಜಿಲ್ಲಾ ಮಟ್ಟದ ಸ್ಥಳೀಯ ದೂರು ಸಮಿತಿ ಹಾಗೂ 10 ಅಥವಾ 10ಕ್ಕಿಂತ ಹೆಚ್ಚು ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ಹಾಗೂ ಖಾಸಗಿ ಕಚೇರಿ/ಘಟಕ ವ್ಯಾಪ್ತಿಯಲ್ಲಿ ಸಮಿತಿ ಕಾರ್ಯನಿರ್ವಹಣೆ ಬಗ್ಗೆ ನಿಗಾವಹಿಸಿ ಕ್ರಮ ಕೈಗೊಳ್ಳಲು, ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ 13 ಸದಸ್ಯರನ್ನು ಒಳಗೊಂಡ ಜಿಲ್ಲಾ ಮಟ್ಟದ ಸಮಿತಿಯು ಕಾರ್ಯನಿರ್ವಹಿಸಲಿದ್ದು, ಈ ಕಾನೂನಿನ ಸಮಗ್ರ ಅನುಷ್ಠಾನ, ಉಸ್ತುವಾರಿ ವಹಿಸಲಿದೆ. ಈ ಕಾಯ್ದೆಯ ಅಡಿಯಲ್ಲಿ ಜಿಲ್ಲೆಯಲ್ಲಿ ಸ್ಥಳೀಯ ದೂರು ಸಮಿತಿಯು ಜಿಲ್ಲಾ ಆಯುಷ್? ಅಧಿಕಾರಿ ಡಾ.ವಂದನಾ ಗಾಳಿ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು, ಆರು ಇಲಾಖೆಗಳ ಅಧಿಕಾರಿಗಳ ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.ಅದರಂತೆ ಜಿಲ್ಲೆಯ ವಿವಿಧ ಇಲಾಖೆಗಳ ವ್ಯಾಪ್ತಿಯಲ್ಲಿ ಹತ್ತು ಅಥವಾ ಹತ್ತು ಗಿಂತ ಹೆಚ್ಚು ಸಿಬ್ಬಂದಿ ಗಳಿರುವ ಒಟ್ಟು 337 ಆಂತರಿಕ ದೂರು ಸಮಿತಿಗಳನ್ನು ರಚಿಸಲಾಗಿದೆ. ಇನ್ನೂ ಆಂತರಿಕ ದೂರು ಸಮಿತಿಗಳು ರಚನೆ ಮಾಡದೇ ಇರುವ ಕಛೇರಿ/ಘಟಕಗಳ ಮೇಲೆ ನಿಯಮಾನುಸಾರ ಕ್ರಮವಹಿಸಲಾಗುವುದು.

ಸಭೆಯ ಅಧ್ಯಕ್ಷತೆವಹಿಸಿದ್ದ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಈ ಆಂತರಿಕ ದೂರು ಸಮಿತಿಗಳು ಕಾಲ ಕಾಲಕ್ಕೆ ಸಭೆ ನಡೆಸಿ ವರದಿ ಸಲ್ಲಿಸಬೇಕು.ಅದರಂತೆ ಸ್ಥಳೀಯ ದೂರು ಸಮಿತಿ ಕೂಡ ಕುಲಂಕುಷವಾಗಿ ಪರಿಶೀಲಿಸಿ ವರದಿ ಸಲ್ಲಿಸುವಂತೆ ಹಾಗೂ ದೂರುಗಳು ಸ್ವೀಕೃತವಾಗದಿದ್ದರೂ ಸಹ ಪ್ರತಿ 3 ತಿಂಗಳುಗಳಿಗೊಮ್ಮೆ ಸಭೆ ನಡೆಸಿ ವರದಿ ಸಲ್ಲಿಸುವಂತೆ ಸೂಚನೆ ನೀಡಿದರು. ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಧರಣೇಶ್ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ತಿಪ್ಪಣ್ಣ ಸಿರಸಗಿ ಸ್ವಾಗತಿಸಿ, ಅವಶ್ಯಕ ಮಾಹಿತಿ ನೀಡಿದರು.

ಉಪ ಚುನಾವಣೆ ಬಿಜೆಪಿಯಿಂದ ಪ್ರಚಾರ ಕಾರ್ಯಾಲಯ ಉದ್ಘಾಟನೆ. ಚುನಾವಣಾ ಪ್ರಚಾರಕ್ಕೆ ಚಾಲನೆ

ಬಾಗಲಕೋಟೆಯಲ್ಲಿ ನನ್ನ ಗೆಲುವಲ್ಲ, ಬಿಜೆಪಿ, ಹಿಂದುತ್ವದ ಗೆಲುವಾಗಲಿ : ವೀರಣ್ಣ ಚರಂತಿಮಠ

ಬಾಗಲಕೋಟೆ,ಮಾ.21-

ಬಾಗಲಕೋಟೆಯಲ್ಲಿ ನನ್ನ ಗೆಲುವಲ್ಲ, ಬಿಜೆಪಿ, ಹಿಂದುತ್ವದ ಗೆಲುವಾಗಲಿ ಎಂದು ಮಾಜಿ ಶಾಸಕ ಬಿಜೆಪಿ ಅಭ್ಯರ್ಥಿಯಾದ ಡಾ,ವೀರಣ್ಣ ಚರಂತಿಮಠ ಹೇಳಿದರು.

ಅವರು ನಗರದ ಶಿವಾನಂದ ಜಿನ್ ನಲ್ಲಿರುವ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಕಾರ್ಯಾಲಯದಲ್ಲಿ ಗುರುವಾರ ಚುನಾವಣಾ ಪ್ರಚಾರ ಕಾರ್ಯಾಲಯದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು ತಮ್ಮನ್ನು ಪಕ್ಷದ ಅಭ್ಯರ್ಥಿಯನ್ನಾಗಿ ಘೋಷಣೆ ಮಾಡಿದ ಪಕ್ಷ ಕೇಂದ್ರ ಹಾಗೂ ರಾಜ್ಯದ ಮುಖಂಡರಿಗೆ ಅಭಿನಂದನೆಗಳನ್ನು ತಿಳಿಸಿದ ಅವರು ಯಾವತ್ತಿದ್ದರೂ ಬಾಗಲಕೋಟೆ ಭಾರತೀಯ ಜನತಾ ಪಕ್ಷದ ಭದ್ರ ಕೋಟೆ, 2023 ಪಕ್ಷದಲ್ಲಿನ ಗೊಂದಲ ಹಾಗೂ ಕಾಂಗ್ರೆಸ್ಸಿ ನ ಗ್ಯಾರಂಟಿಗಳಿಂದ ಸೋಲಾಯಿತು, ಆದರೆ ಮತ್ತೆ ಲೋಕಸಭೆ ಚುನಾವಣೆಯಲ್ಲಿ ಮತ್ತೆ ಗೇಲುವು ಸಾಧಿಸಿದೇವು, ಈ ಚುನಾವಣೆ ಯಾರಿಗೂ ಬೇಕಾಗಿರಲಿಲ್ಲಾ ಅನಿವಾರ್ಯವಾಗಿ ಚುನಾವಣೆ ಬಂದಿದೆ, ರಾಜ್ಯದಲ್ಲಿ ಕಾಂಗ್ರೆಸ್ಸ ಸರಕಾರ ಇರುವುದರಿಂದ ಸರಕಾರವೇ ಇಲ್ಲಿ ಬಂದು ಕೂತರು ಸಹಿತ ಬಿಜೆಪಿ ಕಾರ್ಯಕರ್ತರೂ ನಿರ್ಭಿಡೆಯಿಂದ ಕೆಲಸ ಮಾಡಿರಿ, ಚುನಾವಣೆಯನ್ನು ಹಬ್ಬದಂತೆ ಆಚರಣೆ ಮಾಡೋಣ, ಇಲ್ಲಿ ಧರ್ಮ ಹಾಗೂ ಹಿಂದೂತ್ವ ಗೆಲ್ಲಬೇಕು. ಬಾಗಲಕೋಟೆ ಹಿಂದುತ್ವದ ಭದ್ರಕೋಟೆ ಇಲ್ಲಿ ಕಮಲ ಅರಳಿ ಕಾರ್ಯಕರ್ತರ ಪಕ್ಷದ ಗೇಲುವಾಗಲಿ ಎಂದರು.

ಚುನಾವಣಾ ಪ್ರಚಾರ ಕಾರ್ಯಾಲಯವನ್ನು ಉದ್ಘಾಟಿಸಿ ಚುನಾವಣಾ ಪ್ರಚಾರಕ್ಕೆ ಅಧಿಕೃತ ಚಾಲನೆ ನೀಡಿ ಮಾತನಾಡಿದ ರಾಜ್ಯ ಪ್ರಧಾನ ಕಾರ್ಯದರ್ಶಿ ಶರಣು ತಳ್ಳಿಕೇರಿ ಭಾರತೀಯ ಜನತಾ ಪಾರ್ಟಿ ಅಧಿಕಾರ ಅವಧಿಯಲ್ಲಿನ ಅಭಿವೃದ್ಧಿ ಕೇಲಸಗಳೆ ನಮಗೆ ಮಾನದಂಡವಾಗಿದ್ದು ಈ ಚುನಾವಣೆಯಲ್ಲಿ ಅತ್ಯಧೀಕ ಮತಗಳಿಂದ ಬಿಜೆಪಿ ಅಭ್ಯರ್ಥಿ ಡಾ.ವೀರಣ್ಣ ಚರಂತಿಮಠರ ಗೇಲುವು ನಿಶ್ಚಿತ, ಯದ್ದೋಪಹಾದಿಯಲ್ಲಿ ಪ್ರಚಾರ ಕಾರ್ಯವನ್ನು ಮಾಡಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸೋಣ ಎಂದರು.

ಚುನಾವಣಾ ಉಸ್ತುವಾರಿ ಅರುಣ ಶಹಾಪುರ ಮಾತನಾಡಿ ಬಾಗಲಕೋಟೆ ಅಭಿವೃದ್ಧಿ ಖಂಡಿದ್ದು ಬಿಜೆಪಿ ಸರಕಾರದ ಅವಧಿ ಡಾ.ವೀರಣ್ಣ ಚರಂತಿಮಠರು ಶಾಸಕರಾದ ಅವಧಿಯಲ್ಲಿ ಎಂಬುವುದು ಜನಜನಿತ, ಅಭಿವೃದ್ಧಿಯ ಆಧಾರ ಮೇಲೆ ಮನೆ ಮನೆ ಪ್ರಚಾರ ಮಾಡಿ ಬೂತ ಗೆಲ್ಲುವ ಮೂಲಕ ಬಾಗಲಕೋಟೆ ಮತಕ್ಷೇತ್ರವನ್ನು ಗೆದ್ದು ಹೊಸ ವರ್ಷ ಯುಗಾದಿಯ ಶುಭ ಸಂದೇಶವನ್ನು ಸಾರೋಣ ಎಂದರು.



ರಾಜ್ಯಸಭಾ ಸದಸ್ಯರ ನಾರಾಯಣಸಾ ಭಾಂಡಗೆ ಮಾತನಾಡಿ ಅಭಿವೃದ್ಧಿ ಶೂನ್ಯ ಕಾಂಗ್ರೆಸ್ಸ ಆಡಳಿತದಿಂದ ಜನ ಕಂಗಾಲಾಗಿದ್ದಾರೆ, ಬಿಜೆಪಿಯನ್ನು ಗೆಲ್ಲಿಸುವ ಮೂಲಕ ಬಾಗಲಕೋಟೆ ಜನ ಹೊಸ ಸಂದೇಶ ಸಾರಲಿದ್ದಾರೆ,

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿ ಕಳೆದ ಮೂರು ವರ್ಷಗಳಲ್ಲಿ ಬಾಗಲಕೋಟೆಯಲ್ಲಿ ಅಭಿವೃದ್ಧಿ

ಶೂನ್ಯ ವಾತಾವರಣ ನಿರ್ಮಾಣವಾಗಿದೆ, ಜನರ ಇಂದು ಬಿಜೆಪಿ ಪರವಾಗಿ ಮತ ನೀಡಲು ಸಿದ್ದರಾಗಿದ್ದಾರೆ, ಚುನಾವಣೆಯನ್ನು ಎದುರಿಸಲೂ ಪಕ್ಷದ ಕಾರ್ಯಕರ್ತರು ಉತ್ಸಾ ಹದಲ್ಲಿದ್ದಾರೆ, ಬಿಜೆಪಿಯನ್ನು ಮತ್ತೆ ಗೆಲ್ಲಿಸೋಣ ಎಂದರು.

ಸಂಸದ ಪಿ.ಸಿ.ಗದ್ದಿಗೌಡರ, ಡಾ.ಎಂ.ಎಸ್.ದಡ್ಡೆನ್ನವರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೋಣ್ಣೂರ ವೇದಿಕೆ ಮೇಲೆ ಉಪಸ್ಥಿತರಿದ್ದರು, ಹೆಚ್ಚಿನ ಸಂಖ್ಯೆಲ್ಲಿ ಪಕ್ಷದ ಮುಖಂಡರು, ವಿವಿಧ ಮೋರ್ಚಾಗಳ ಪಧಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿದ್ದರು.

23 ಸೋಮವಾರ ನಾಮಪತ್ರ ಸಲ್ಲಿಕೆ: ಅಂದು ಕಣವಿ ವೀರಭದ್ರೇಶ್ವರ ದೇವಸ್ಥಾನದಿಂದ ಭವ್ಯ ಮೇರವಣಿಗೆ ಪ್ರಾರಂಭವಾಗಿ ಬಿಳೂರು ಅಜ್ಜನ ಗುಡಿ, ಕಾಲೇಜು ರಸ್ತೆ ಟೀಕಿನಮಠ, ಅಡತ ಬಜಾರ, ಪೋಲಿಸ ಚೌಕ, ಮಹಾತ್ಮ ಗಾಂಧಿ ರಸ್ತೆ ಮೂಲಕ ಬಸವೇಶ್ವರ ವೃತ್ತದಲ್ಲಿ ಸಮಾರೋಪಗೊಳ್ಳುವುದು, ರಾಜ್ಯದ ನಾಯಕರು ಸಾರ್ವಜನಿಕರನ್ನೂದ್ದೇಶಿಸಿ ಮಾತನಾಡುವರು, ನಂತರ ನಾಮಪತ್ರ ಸಲ್ಲಿಸಲಾಗುವುದು ಹೆಚ್ಚಿನ ಸಂಖ್ಯೆಯಲ್ಲಿ ನಗರ ಗ್ರಾಮೀಣ ಭಾಗದ ಕಾರ್ಯಕರ್ತರು ಅಭಿಮಾನಿಗಳು.ಸಾರ್ವಜಿಕರು ಅಗಮಿಸಿ ಯಶಸ್ವಿಗೊಳಿಸವುಂತೆ ಬಿಜೆಪಿ ಅಭ್ಯರ್ಥಿಯಾದ ಡಾ.ವೀರಣ್ಣ ಚರಂತಿಮಠ ವಿನಂತಿಸಿದ್ದಾರೆ.


ಪ್ಯಾಲೆಸ್ಟೈನ್ ದೇಶದ ಗಾಜಾದಲ್ಲಿ ಗಂಗಾವತಿಯ ಯುವಕನಿಂದ ರಂಜಾನ್ ಆಚರಣೆ



ಗಂಗಾವತಿ,ಮಾ.21-

ಪ್ಯಾಲೆಸ್ಟೈನ್ ದೇಶದ ಗಾಜಾದಲ್ಲಿ ಗಂಗಾವತಿಯ ಯುವಕ ರಂಜಾನ್ ಆಚರಣೆ ಹಬ್ಬ ನಿಮಿತ್ಯ ತನ್ನ ಸಹೋದರ ದಿ.ಮಹ್ಮದ್ ಅರೀಫ್ ಹುಸೇನ್ ಸ್ಮರಣಾ ರ್ಥವಾಗಿ ಸಮಾಜಸೇವಕರಾದ ಎಂ.ಡಿ ಆಸೀಫ್ ಹುಸೇನ್ ಅವರು 27ನೇ ಉಪವಾಸ ದಿನದಂದು ಇಫ್ತೀಯಾರ್ ಕೂಟ ಏರ್ಪಿಡಿಸಿ ಸಹಕರಿಸಿದ್ದಾರೆ.

ಗಂಗಾವತಿಯ ಸಮಾಜ ಸೇವಕ ಹಾಗು ಮುಸ್ಲಿಂ ಸಮಾಜದ ಯುವ ಮುಖಂಡರಾಗಿರುವ ಎಂ.ಡಿ . ಅಸೀಫ್ ಹುಸೇನ್ ಗಂಗಾವತಿ ನಗರದಲ್ಲಿ ಜಾತ್ಯಾತೀತವಾಗಿ ಸಮಾಜ ಸೇವೆಯೊಂದಿಗೆ ದೀನ ದಲಿತರಿಗೆ ಶ್ರಮಿಸುತ್ತಿದ್ದಾರೆ. ಇವರ ಸಹೋದರ ದಿ.ಮಹ್ಮದ್ ಅರೀಫ್ ಹುಸೇನ್ ದುಬೈದಲ್ಲಿ ಕಳೆದ ವರ್ಷ ನಿಧನರಾಗಿದ್ದಾರೆ. ಇವರು ಪ್ರತಿ ವರ್ಷ ರಂಜಾನ್ ಹಬ್ಬದಲ್ಲಿ ಇಫ್ತೀಯಾರ್ ಕೂಟ ಏರ್ಪಿಡಿಸಿ ರಂಜಾನ್ ಹಬ್ಬವನ್ನು ಶ್ರದ್ಧಾ ಭಕ್ತಯಿಂದ ಆಚರಿಸುತ್ತಾ ಬಂದಿದ್ದರು. ಇವರ ಆಸೆಯಂತೆ ಇವರ ಸ್ಮರಣಾರ್ಥವಾಗಿ ಪ್ಯಾಲೆಸ್ಟೈನ್ ದೇಶದ ಗಾಜಾದಲ್ಲಿ ವಾಸಮಾಡುತ್ತಿರುವ ದಕ್ಷಿಣಾ ಭಾರತ ಮತ್ತು ಚನ್ನೈ, ಕೇರಳ, ಕರ್ನಾಟಕದ ತುಮಕೂರು ಸೇರಿದಂತೆ ವಿವಿಧ ರಾಜ್ಯಗಳಿಂದ ವಾಸವಾಗಿರುವ 200 ಕ್ಕು ಹೆಚ್ಚು ಮುಸ್ಲಿಂ ಜನಾಂ ಗದವರಿಗೆ ಇಫ್ತೀಯಾರ್ ಕೂಟ ಏರ್ಪಡಿಸಿದ್ದಾರೆ. ಎಂ.ಡಿ . ಅಸೀಫ್ ಹುಸೇನ್ ಅವರು ಕೆಲ ಯುವಕರ ತಂಡ ರಚಿಸಿ ಗಂಗಾವತಿಯಿಂದಲೆ ಈ ಕಾರ್ಯಕ್ಕೆ ಮುಂದಾಗಿದ್ದಾರೆ.



ಉಪ ಚುನಾವಣೆ : ನಾಯನೇಗಲಿ ಚೆಕ್‌ಪೋಸ್ಟನಲ್ಲಿ 15.50 ಲಕ್ಷ ರೂ.ಗಳ ಹಣ ಆಪ್ತಿ

ಬಾಗಲಕೋಟೆ,ಮಾ.21-

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯ ಹಿನ್ನಲೆಯಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸುತ್ತಿರುವ ಅಧಿಕಾರಿಗಳು ನಾಯನೇಗಲಿ ಚೆಕ್‌ಪೋಸ್ಟನಲ್ಲಿ ದಾಖಲೆ ಇಲ್ಲದೇ ಸಾಗಿಸುತ್ತಿದ್ದ 15.50 ಲಕ್ಷ ರೂ.ಗಳ ಹಣವನ್ನು ಜಪ್ತಿ ಮಾಡಲಾಗಿದೆ. ಉಪ ಚುನಾವಣೆ ಹಿನ್ನಲೆಯಲ್ಲಿ ಜಿಲ್ಲೆಯಾದ್ಯಂತ ನೀತಿ ಸಂಹಿತೆ ಜಾರಿಯಲ್ಲಿದ್ದು, ಪಿಎಂಜಿಎಸ್‌ವಾಯ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಆಕಾಶಕುಮಾರ ಜಾದವ ನೇತೃತ್ವದ ಎಫ್‌ಎಸ್‌ಟಿ ತಂಡ ಚೆಕ್‌ಪೋಸ್ಟನಲ್ಲಿ ವಾಹನಗಳ ಪರಿಶೀಲನೆ ನಡೆಸುತ್ತಿದ್ದು, ಈ ವೇಳೆ ಅನುಮಾನಾಸ್ಪದವಾಗಿ ಸಾಗಿಸಲಾಗುತ್ತಿದ್ದ ಕಾರನಲ್ಲಿ ನಗದು ಪತ್ತೆಯಾಗಿದೆ. ಬಬಲೇಶ್ವರದಿಂದ ಕುಷ್ಟಗಿ ಕಡೆ ಹೊರಟಿದ್ದ ಕೆಎ-28, ಎಎ-4833 ನಂಬರಿನ ಮಾರುತಿ ಸುಜುಕಿ ಸಿಫ್ಟ ಡಿಸೈಯರ್ ಕಾರನ್ನು ಬುಧವಾರ ಸಂಜೆ ವೇಳೆ ತಪಾಸಣೆಗೆ ಮಾಡಿದಾಗ ದಾಖಲೆ ಇಲ್ಲದ 15.50 ಲಕ್ಷ ರೂ.ಗಳ ಹಣವನ್ನು ಜಪ್ತಿ ಮಾಡಲಾಗಿದೆ. ದಾಖಲೆಗಳ ಕೊರತೆಯಿಂದ ಹಣವನ್ನು ವಶಕ್ಕೆ ಪಡೆಯಲಾಗಿದ್ದು, ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ತುಂಗಭದ್ರಾ ಜಲಾಶಯಕ್ಕೆ ಸಣ್ಣ ನೀರಾವರಿ ಸಚಿವರ ಭೇಟಿ: ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾಮಗಾರಿಯ ಪರಿವೀಕ್ಷಣೆ

ಎಲ್ಲಾ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಮೇ ಅಂತ್ಯದೊಳಗೆ ಪೂರ್ಣ: ಎನ್.ಎಸ್. ಭೋಸರಾಜು

ಕೊಪ್ಪಳ ಮಾ.21

ರೈತರ ಜೀವನಾಡಿ ತುಂಗಭದ್ರಾ ಜಲಾಶಯದ ಎಲ್ಲಾ 33 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯವನ್ನು ಮೇ ಅಂತ್ಯದೊಳಗೆ ಪೂರ್ಣಗೊಳಿಸಿ, ರೈತರಿಗೆ ಅನುಕೂಲ ಮಾಡಿಕೊಡಲಾಗುವುದು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ವಿಧಾನ ಪರಿಷತ್ ಸಭಾ ನಾಯಕರಾದ ಎನ್.ಎಸ್. ಭೋಸರಾಜು ಹೇಳಿದರು.

ಅವರು ಶುಕ್ರವಾರ ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ನ ತುಂಗಭದ್ರಾ ಜಲಾಶಯದ ಆಣೆಕಟ್ಟಿನ ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾಮಗಾರಿಯ ಪರಿವೀಕ್ಷಣೆ ಮಾಡಿ, ಮಾಧ್ಯಮದವರೊಂದಿಗೆ ಮಾಹಿತಿ ನೀಡಿ ಮಾತನಾಡಿದರು.

ಈಗಾಗಲೇ ತುಂಗಭದ್ರಾ ಜಲಾಶಯದ 18 ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪೂರ್ಣಗೊಂಡಿದ್ದು, 5 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ. ಮಾರ್ಚ್ ಅಂತ್ಯದ ವೇಳೆಗೆ ಒಟ್ಟು 23 ಗೇಟ್‌ಗಳ ಕೆಲಸ ಮುಗಿಯುವ ನಿರೀಕ್ಷೆಯಿದೆ. ನುರಿತ ತಜ್ಞರ ತಂಡ ಮತ್ತು ಚೀಫ್ ಎಂಜಿನಿಯರ್‌ಗಳ ಪ್ರಕಾರ, ಗೇಟ್ ಬದಲಾವಣೆಯ ಸಮಯದಲ್ಲಿ ಹಳೆಯ ಅಣೆಕಟ್ಟಿನ ರಚನೆಗೆ ಯಾವುದೇ ತೊಂದರೆಯಾಗಿಲ್ಲ. ಏಪ್ರಿಲ್ ತಿಂಗಳಿನಲ್ಲಿ ಉಳಿದ 10 ಗೇಟ್‌ಗಳನ್ನು ಅಳವಡಿಸಿ, ಮೇ ಅಂತ್ಯದೊಳಗೆ ಎಲ್ಲಾ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾಮಗಾರಿ ಪೂರ್ಣಗೊಳ್ಳುವ ಭರವಸೆ ಇದೆ. ಕಾಮಗಾರಿಯು ನಿರೀಕ್ಷಿತ ಸಮಯಕ್ಕಿಂತ ವೇಗವಾಗಿ ಸಾಗುತ್ತಿದ್ದು, ಜೂನ್‌ನಲ್ಲಿ ಆರಂಭವಾಗುವ ಮುಂಗಾರು ಮಳೆಗಾಲದ ವೇಳೆಗೆ ಜಲಾಶಯವು ಸಂಪೂರ್ಣ ಸಿದ್ಧವಾಗಲಿದೆ ಎಂಬ ವಿಶ್ವಾಸವಿದೆ ಎಂದರು.

ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನ ಸಮಸ್ಯೆಗೆ ಪರಿಹಾರವಾಗಿ 'ನವಲಿ' ಯೋಜನೆಯ ಪ್ರಸ್ತಾವನೆಯನ್ನು ಮಂಡಳಿ ಮತ್ತು ಸಂಬಂಧಿತ ರಾಜ್ಯ ಸರ್ಕಾರಗಳಿಗೆ ಕಳುಹಿಸಲಾಗಿದೆ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರಿಗೂ ಸಹ ಪತ್ರ ವ್ಯವಹಾರ ನಡೆಸಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ನಡೆಯುತ್ತಿದೆ. ತೆಲಂಗಾಣ ಸರ್ಕಾರದೊಂದಿಗೂ ಸಮನ್ವಯ ಸಾಧಿಸಲು ಪ್ರಯತ್ನಿಸಲಾಗುತ್ತಿದ್ದು, ವಿವಿಧ ತಾಂತ್ರಿಕ ಕಾರಣಗಳಿಂದ ವಿಳಂಬವಾಗುತ್ತಿದೆ. ಈ ತಾಂತ್ರಿಕ ಸಮಸ್ಯೆಗಳು ಬಗೆಹರಿದ ನಂತರ ಪೂರ್ಣ ಸಹಕಾರ ಸಿಗುವ ನಿರೀಕ್ಷೆಯಿದೆ. ಈ ಬಗ್ಗೆ ನಮ್ಮ ರಾಜ್ಯದ ವಿವಿಧ ಚುನಾಯಿತ ಪ್ರತಿನಿಧಿಗಳ ನಿಯೋಗವು ನವದೆಹಲಿಯಲ್ಲಿ ಜಲಶಕ್ತಿ



ಸಚಿವಾಲಯದ ಅಧಿಕಾರಿಗಳು ಮತ್ತು ವಿವಿಧ ರಾಜ್ಯಗಳ ಸಂಸದರೊಂದಿಗೆ ಮಹತ್ವದ ಚರ್ಚೆ ನಡೆಸಲಾಗಿದೆ. ಕೇಂದ್ರ ಸಚಿವರು ಮತ್ತು ಅಧಿಕಾರಿಗಳು ಕರ್ನಾಟಕದ ನೀರಾವರಿ ಯೋಜನೆಗಳ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಚುನಾವಣಾ ನೀತಿ ಸಂಹಿತೆಯ ಪ್ರಕ್ರಿಯೆಗಳ ನಂತರ ಮತ್ತೊಂದು ಸುತ್ತಿನ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರು ಹಾಗೂ ಮಸ್ಕಿ ಶಾಸಕರಾದ ಬಸವನಗೌಡ ತುರುವಿಹಾಳ, ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹೇಮಂತ್ ಕುಮಾರ್, ಟಿಬಿ ಬೋರ್ಡ್ ಹಾಗೂ ಕೆ.ಎನ್.ಎನ್.ಎಲ್. ಅಧಿಕಾರಿಗಳಾದ ಮುಖ್ಯ ಇಂಜಿನಿಯರ್ ಶ್ರೀನಿವಾಸ ಮಲ್ಲಿಗಿವಾಡ, ಎಇಇ ಧರ್ಮರಾಜ್ ಹಾಗೂ ಜ್ಞಾನೇಶ್ವರ, ಸೆಕ್ಷನ್ ಅಧಿಕಾರಿಗಳಾದ ಜಿ. ಕಿರಣ, ಪಂಪಾಪತಿ ಡಿ.ಕೆ. ಮತ್ತು ಹುಲಿರಾಜ್ ಸೇರಿದಂತೆ ಇತರೆ ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಜೀವಾವಧಿ ಶಿಕ್ಷೆಗೆ ಗುರಿಯಾದ ವ್ಯಕ್ತಿಯನ್ನು 20 ವರ್ಷಗಳ ಬಳಿಕ ಬಿಡುಗಡೆ ಮಾಡಬೇಕು ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ : ಹೈಕೋರ್ಟ್

ಸೂಕ್ತ ಶಾಸನಬದ್ಧ ನಿಬಂಧನೆಗಳ ಅಡಿ ಕ್ಷಮಾದಾನ ಕೋರಬಹುದಾಗಿದೆ. ಇಂಥ ಅರ್ಜಿಯನ್ನು ಸಲ್ಲಿಸಿದರೆ ಸೂಕ್ತ ಸರ್ಕಾರ/ಶಿಕ್ಷೆ ಪರಿಶೀಲನಾ ಮಂಡಳಿಯು ಪ್ರಕರಣದ ಆಧಾರದ ಮೇಲೆ ಅಪರಾಧಿಯು ಶಿಕ್ಷೆ ಅನುಭವಿಸಿರುವ ಅವಧಿ, ಅರ್ಜಿದಾರನ ನಡತೆ, ಅಪರಾಧದ ಸ್ವರೂಪ, ಸಂತ್ರಸ್ತರ ಹಿತಾಸಕ್ತಿ ಮತ್ತು ಅನ್ವಯಿಸುವ ನೀತಿಯನ್ನು ಪರಿಗಣಿಸಿ ನಿರ್ಧರಿಸಬಹುದಾಗಿದೆ ಎಂದು ಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

ಪ್ರಕರಣದ ಹಿನ್ನೆಲೆ : ಇಬ್ಬರು ಮಕ್ಕಳನ್ನು ಅಪಹರಿಸಿ ಕೊಲೆ ಮಾಡಿದ ಪ್ರಕರಣದಲ್ಲಿ ಅರ್ಜಿದಾರ ಕಿಶನ್ ಸೇರಿ ಮೂವರಿಗೆ ಬೆಂಗಳೂರಿನ ಸೆಷನ್ಸ್ ನ್ಯಾಯಾಲಯ ಪ್ರಾರಂಭದಲ್ಲಿ ಮರಣದಂಡನೆ ವಿಧಿಸಿತ್ತು.

ಈ ಪ್ರಕರಣದ ಮೇಲ್ಮನವಿ ಪ್ರಕ್ರಿಯೆಯು 2013ರಲ್ಲಿ ಪೂರ್ಣಗೊಂಡಿದ್ದು, ಹೈಕೋರ್ಟ್ ಮರಣದಂಡನೆ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಪರಿವರ್ತಿಸಿತ್ತು. ಐಪಿಸಿ ಸೆಕ್ಷನ್ 57ರ ಅಡಿ 14 ವರ್ಷ ಜೈಲು ಶಿಕ್ಷೆ ಪೂರ್ಣಗೊಂಡ ಬಳಿಕ ಶಿಕ್ಷೆಯ ಅವಧಿಯಲ್ಲಿ ಯಾವುದೇ ಕಡಿತ ಇರುವುದಿಲ್ಲ ಎಂಬ ಸ್ಪಷ್ಟ ನಿರ್ದೇಶನವನ್ನೂ ನ್ಯಾಯಾಲಯ ನೀಡಿತ್ತು. 2025ರ ಜನವರಿ 15ರಂದು 20 ವರ್ಷ ಶಿಕ್ಷೆ ಪೂರೈಸಿದ್ದ ಕಿಶನ್, ಐಪಿಸಿ ಸೆಕ್ಷನ್ 57ರ ಅಡಿ ಕ್ಷಮಾದಾನಕ್ಕೆ ಅರ್ಹವಾಗಿರುವುದರಿಂದ ಬಿಡುಗಡೆ ಮಾಡುವಂತೆ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ದೇವರ ದಾಸಿಮಯ್ಯ ಜಯಂತಿ ಆಚರಣೆಗೆ ಸಜ್ಜು ನೇಕಾರ ಸಮುದಾಯಕ್ಕೆ ಆಹ್ವಾನ- ಜಿ. ನಾಗರಾಜ

ಕಾರ್ಯಕ್ರಮದಲ್ಲಿ ಉಪನ್ಯಾಸವನ್ನು ರಮೇಶಬಾಬು ಯಾಳಗಿ ನೀಡಲಿದ್ದಾರೆ. ಆಡಳಿತಾತ್ಮಕ ಅಧಿಕಾರಿಗಳಾಗಿ ಕೆ. ನಿತೀಶ್, ಈಶ್ವರ್ ಕುಮಾರ ಕಾಂದೂ, ಅರುಣಾಂಗ್ಶು ಗಿರಿ, ಜುಬಿನ್ ಮೊಹಪಾತ್ರ ಭಾಗವಹಿಸಲಿದ್ದಾರೆ.

ಜಿಲ್ಲೆಯ ಎಲ್ಲಾ ನೇಕಾರ ಸಮುದಾಯದವರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಜಿ. ನಾಗರಾಜ ಮನವಿ ಮಾಡಿದರು. ಜಯಂತಿಯ ಅಂಗವಾಗಿ ಉಪಹಾರ ಮತ್ತು ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಲಾಗಿದೆ. ನೇಕಾರ ಸಮುದಾಯದವರು ತಮ್ಮ ವ್ಯಾಪಾರ ವಹಿವಾಟುಗಳನ್ನು ಸ್ಥಗಿತಗೊಳಿಸಿ ಹಾಗೂ ಮಹಿಳೆಯರು ಕುಂಭ ಕಳಸಗಳೊಂದಿಗೆ ಭಾಗವಹಿಸುವಂತೆ ಕೋರಲಾಗಿದೆ.

ಈ ಸಂದರ್ಭದಲ್ಲಿ ಎಚ್. ವೆಂಕಟೇಶ್, ದೊಡ್ಡ ಈರಣ್ಣ ಕೊಳ್ಳಿ, ಉದಯ್ ಕುಮಾರ್, ಪಿ. ಗೋವಿಂದರಾಜು, ಶ್ರೀನಿವಾಸ್ ರಾವ್, ಕೆ.ಎಸ್. ಸಂಜಯ್ ಕುಮಾರ್ ಉಪಸ್ಥಿತರಿದ್ದರು.

ಈದ್ಗಾ ಮೈದಾನದಲ್ಲಿ ರಂಜಾನ್ ಸಂಭ್ರಮ ಸೌಹಾರ್ದತೆಗೆ ಸಂದೇಶ

ಸಕ್ರಿಯ ಭಾಗವಹಿಸುವಿಕೆ ಗಮನ ಸೆಳೆಯಿತು.

ಕಾರ್ಯಕ್ರಮದ ಅಂಗವಾಗಿ ಮಹಾನಗರ ಪಾಲಿಕೆ ವತಿಯಿಂದ ಕುಡಿಯುವ ನೀರು, ಸ್ವಚ್ಛತೆ ಮತ್ತು ಭದ್ರತಾ ವ್ಯವಸ್ಥೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಸಮರ್ಪಕವಾಗಿ ಕಲ್ಪಿಸಲಾಗಿತ್ತು.

ಈ ಸಂದರ್ಭದಲ್ಲಿ ಸಚಿವ ಎನ್.ಎಸ್. ಬೋಸರಾಜು, ಸಂಸದ ಜಿ. ಕುಮಾರ್ ನಾಯಕ, ಮಹಾನಗರ ಪಾಲಿಕೆ ಸದಸ್ಯರಾದ ಸಾಜೀದ್ ಸಮೀರ್, ಮೊಹಮ್ಮದ್ ಶಲಾಂ, ಕೆ. ಶಾಂತಪ್ಪ, ರುದ್ರಪ್ಪ ಅಂಗಡಿ, ಅಮರೇಗೌಡ ಹಂಚಿನಾಳ, ಜಿ. ಶಿವಮೂರ್ತಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದು, ಸಾರ್ವಜನಿಕರಿಗೆ ರಂಜಾನ್ ಹಬ್ಬದ ಶುಭಾಶಯಗಳನ್ನು ತಿಳಿಸಿದರು.

ಸಂಭ್ರಮದ ಈದುಲ್ ಫಿತ್ರ್ ಆಚರಣೆ

ಈದ್ಗಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಸೈಯದ್ ಹಾರೂನ್ ಜಾಗೀರಾದಾರ್, ಮುಸ್ಲಿಂ ಸಮಾಜದ ಮುಖಂಡರಾದ ಸೈಯದ್ ಬಾಬರ್ ಪಾಷಾ ವಕೀಲ, ಕೆ.ಜಿಲಾನಿ ಪಾಷಾ, ಎಂ.ಡಿ.ನದೀಮುಲ್ಲಾ, ಸೈಯದ್ ಆಬೀದ್ ಖಾದ್ರಿ, ಖಾಜಿಮಲಿಕ್, ಸೈಯದ್ ಖಾದರ್ ಸುಭಾನಿ, ಮುಹಮ್ಮದ್ ಸಾಬ್ ಮುಸ್ತಫಾ, ಬಾಬರ್ ಪಟೇಲ್, ಹಾಜಿ ಮಸ್ತಾನ್, ಸಲ್ಮಾನ್ ಜಾಗೀರಾದಾರ್, ಮುಹಮ್ಮದ್ ಅಲ್ತಾಫ್ ಸಾಹುಕಾರ, ಶಫೀವುಲ್ಲಾ ಖಾನ್, ಶಬ್ಬೀರ್ ಅಹ್ಮದ್, ಮುರ್ತುಜಾ ಹುಸೇನ್, ಫಯಾರುಝ್ ಪೀರಾ, ಸಾಬೀರ್ ಪಾಷಾ ತುರಕಟ್ಟಿ, ಅಮ್ಜದ್ ಖಾನ್ ಸೇರಿದಂತೆ ಮುಸ್ಲಿಂ ಸಮುದಾಯದ ಮುಖಂಡರು ಭಾಗವಹಿಸಿದ್ದರು.

ಮಾ.25ರಂದು ಒಳ ಮೀಸಲಾತಿ ರಹಿತ ಹಳೆ ಮೀಸಲಾತಿಯ ಜಾರಿಗಾಗಿ ಸಮಾವೇಶಕ್ಕೆ ಜಿಲ್ಲೆಯಿಂದ 10 ಸಾವಿರ ಜನ - ಜಗನ್ನಾಥ ಸುಂಕಾರಿ

ಬಲಗೈ ಸಮುದಾಯಕ್ಕೆ ಅನ್ಯಾಯ ಅಪಾಯಕಾರಿಯಾಗಿದೆ. ಒಳ ಮೀಸಲಾತಿಯ ಗೊಂದಲವಾಗಿ ಬಲಗೈ ಸಮಾಜಕ್ಕೆ ಅನ್ಯಾಯವಾಗಿರುವ ರೋಸ್ಟರ್ ಬಿಂದು ಸರಿಪಡಿಸುವಂತೆ ಒತ್ತಾಯಿಸಲಾಗುವುದು ಎಂದರು.

ಶಿವರಾಜ ಜಾನೇಕಲ್ ಮಾತನಾಡಿ ನಿವೃತ್ತ ನ್ಯಾಯಾಧೀಶ ನಾಗಮೋಹನ್ ದಾಸ್ ವರದಿಯನ್ನು ಬಲಗೈ ಸಮಾಜಕ್ಕೆ ಬರುವ ಸಮಾಜದ ಜನರನ್ನು ಹೊಲಯ, ಚಲವಾದಿ, ಬ್ಯಾಗಾರ, ಆದಿ ದ್ರಾವಿಡ, ಆದಿ ಕರ್ನಾಟಕ ಹರಿಜನ ಸಂಬಂಧಿಸಿದ ಬಲಗೈ ಸಮಾಜದ ಜಾತಿಗಳನ್ನು ಅಂಕಿ ಸಂಖ್ಯೆಗಳನ್ನು ತಪ್ಪಾಗಿ ಜನರನ್ನು, ಕಡಿಮೆ ಸಂಖ್ಯೆ ತೋರಿಸಿ. ಒಳ ಮೀಸಲಾತಿಯಲ್ಲಿ ತುಂಬಾ ಅನ್ಯಾಯವಾಗಿದ್ದು. ಆದರಿಂದ ಕೂಡಲೇ ರೋಸ್ಟರ್ ಬಿಂದು ಸರಿಪಡಿಸಿ ಒಳ ಮೀಸಲಾತಿ ಜಾರಿಗೆ ಮಾಡಬೇಕು. ಹೊಲಯ ಸಂಬಂಧಿಸಿದ ಬಲಗೈ ಮತ್ತು ಮಾದಿಗ ಸಮಾಜದ ಇಬ್ಬರಿಗೂ ಅನ್ಯಾಯವಾಗದಂತೆ ಗ್ರೂಪ್ನಲ್ಲಿ ಆರ್ ಪರ್ಸೆಂಟ ಒಳ ಮೀಸಲಾತಿ ಕಲ್ಪಿಸುವ ಅಂಗವಾಗಿ, ಮತ್ತು ಇತರ ಜಾತಿಗೆ ಸಿ ಗ್ರೂಪಿನ ಜನರಿಗು ಮೀಸಲಾತಿ ಸುಪ್ರೀಂ ಕೋರ್ಟಿನ ತೀರ್ಪಿನಂತೆ ರೋಸ್ಟರ್ ಬಿಂದು ಸರಿಪಡಿಸಿ, ಸಮಾಜಗಳಲ್ಲಿ ಪರವಿರೋಧದ ರಾಜಕೀಯ ವಿಷ ಬೀಜ ಬಿತ್ತದೆ ಸಂವಿಧಾನಾತ್ಮಕವಾಗಿ ಹಕ್ಕುಗಳನ್ನು 101 ಜಾತಿ ಗೆ ಶೋಷಣೆಗೆ ಒಳಪಟ್ಟ ಮುಖ್ಯ ಜಾತಿಯ ಹೊಲಯ ಚೆಲುವಾದಿ ಸಂಬಂಧಿಸಿದ ಬಲಗೈ ಮತ್ತು ಮಾದಿಗ ಸಮಾಜದ ಎಲ್ಲಾ ಯುನಿವರ್ಸಿಟಿಗಳಲ್ಲಿ ಓದುತ್ತಕಂತ ವಿದ್ಯಾರ್ಥಿಗಳಿಗೆ ಉದ್ಯೋಗ ದೊರಕಿಸಲು ಅನುಕೂಲ ಕಲ್ಪಿಸಲು ಬೃಹತ್ ಮಟ್ಟದ ಚಲವಾದಿ ಬಲಗೈ ಸಮಾಜದ ಬಂಧುಗಳು ಮತ್ತು ಇತರೆ ಎಸಿ 101 ಜಾತಿಯ ಸಮಾಜಕ್ಕೆ ಅನ್ಯಾಯ ಆಗದಂತೆ ಮಾರ್ಚ್ ಇದೇ ತಿಂಗಳ 25 ಅತಿ ಹೆಚ್ಚಿನ ಜನಸಂಖ್ಯೆಯಲ್ಲಿ ಸ್ವಾಭಿಮಾನದ ಹೋರಾಟ ಅಂಬೇಡ್ಕರ್ರವರ ಅಭಿಮಾನಿಗಳು ತತ್ವ ಆದರ್ಶಗಳು ತಪ್ಪದೆ ಹೋರಾಟಕ್ಕೆ ಯಶಸ್ವಿಗೊಳಿಸಬೇಕು ಎಂದರು .ಛಲವಾದಿ ಸಮುದಾಯದ ಹಿರಿಯ ಮುಖಂಡರಾದ ಶಿವರಾಜ ಉಮಳಿಹೋಸುರು ಮಾನವಿ ತಾಲೂಕ ಅದ್ಯಕ್ಷರು,, ,ಪಿ.ತಿಪ್ಪಣ್ಣ ವಕೀಲರು ಬಾಗಲವಾಡ,ಲಂಕೇಶ ಮರಾಠ ಸಿರವಾರ ತಾಲೂಕ ಅದ್ಯಕ್ಷರು, ಹನುಮಂತ ಸೀಕಲ್, ಹನುಮೇಶ ಸಿರವಾರ ಪತ್ರಕರ್ತ ರ ಸಂಘದ ಅದ್ಯಕ್ಷರು, ಬಾಲಪ್ಪ ಹಳ್ಳಿಹೋಸುರು ಮರಿಲಿಂಗಪ್ಪ, ಮುದ್ದೆಪ್ಪ ದಳಪತಿ ಹೀರಾ,ಮಲ್ಲಯ್ಯ, ಹನುಮಂತ, ಗುರಪ್ಪ,ರಮೇಶ ತಿಮ್ಮಣ್ಣ, ನಾಗರಾಜ ಬಾಗಲವಾಡ, ಮೌನೇಶ ಕೊರಿ, ರಂಗಸ್ವಾಮಿ ಹೊಕ್ರಾಣಿ, ರಮೇಶಭಂಡಾರಿ, ಮಲ್ಲಪ್ಪ, ,ಮೌನೇಶ ಕೋರಿ, ಅಮರೇಶ ಬಾದರದಿನ್ನಿ,ಮುದುಕಪ್ಪ ದಳಪತಿ,ಹುಚ್ಚಪ್ಪ ಒಡವಟ್ಟಿ,ರಮೇಶ ಜಂಬಲದಿನ್ನಿ,ಮಹಾದೇವಪ್ಪ ಕೋರಿ,ದತ್ತಾತ್ರಯ್ಯ ವಕೀಲರು, ನಾಗರಾಜ ಹಿಂದಿನಮನೆ,ರವಿ ಮಲ್ಲಟ,ಶ್ರೀನಿವಾಸ ನಂದಿಹಾಳ, ರಮೇಶ ಜಂಬಲದಿನ್ನಿ, ಹನುಮಂತ, ಶಂಕರ ಮರಾಠ ಇನ್ನಿತರರು ಇದ್ದರು.

ಬಿ.ಗಣೇಕಲ್‌ನಲ್ಲಿ ಅದ್ದೂರಿ ರಂಜಾನ್ ಹಬ್ಬ ಆಚರಣೆ



ಅರಕೇರಾ,ಮಾ.21-

ತಾಲೂಕಿನ ಬಿ.ಗಣೇಕಲ್ ಗ್ರಾಮದಲ್ಲಿ ಇಂದು ತ್ಯಾಗ ಮತ್ತು ಶಾಂತಿಯ ಸೌಹಾರ್ದತೆಯ ಪ್ರತೀಕ,ಸಹೋದರತೆ ಸಮಾನತೆ ಪರೋಪಕಾರ ಸಂದೇಶ ಸಾರುವ ಮುಸ್ಲಿಂ ಬಾಂಧವರ ಪವಿತ್ರ ಹಬ್ಬವಾದ ರಂಜಾನ ಹಬ್ಬವನ್ನು ಇಂದು ಬಿ.ಗಣೇಕಲ್ ನ ಮುಸ್ಲಿಂ ಸಮುದಾಯದವರು ಅತ್ಯಂತ ವಿಜೃಂಬಣೆಯಿಂದ ಆಚರಿಸಿದರು.

ಮುಂಜಾನೆ ಕೇಂದ್ರ ಸ್ಥಾನ ಮಸೀದಿಯಿಂದ ಪ್ರಮುಖ ಬೀದಿಗಳಲ್ಲಿ ಧರ್ಮ ಪಠಣ ಗೀತೆಗಳನ್ನು ಜಪ ಮಾಡುತ್ತಾ ಕಾಲ್ನಡಿಗೆ ಮುಖಾಂತರ ಈದ್ಗಾವರೆಗೆ ತಲುಪಿದರು ನಂತರ ಎಲ್ಲಾ ಮುಸ್ಲಿಂ ಬಾಂಧವರಿಗೆ ಮೌಲ್ವಿಯವರಿಂದ ರಂಜಾನ್ ಹಬ್ಬವು ಮುಸ್ಲಿಮರಿಗೆ ಬದುಕಿನ ಅನೇಕ ಪಾಠಗಳನ್ನು ಕಲಿಸಿಕೊಡುತ್ತದೆ ದೇಹವನ್ನು ಹಸಿವಿಗೆ ಒಳಪಡಿಸಿ ಗೆಲ್ಲುವುದು ಇದರಿಂದ ಹಸಿವಿಗೆ ಒಳಗಾಗುವ ಬಡವರ ಸಂಕಟಗಳನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ಈ ರಂಜಾನ್ ತಿಂಗಳಲ್ಲಿ ಉಪವಾಸ ಕೈಗೊಳ್ಳುವುದರ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಇದರೊಂದಿಗೆ ದುಂದು ವೆಚ್ಚಕ್ಕೆ ಕಡಿವಾಣ ಹಾಕುವುದು ಕೆಟ್ಟ ವಿಚಾರಗಳನ್ನು ಕೆಟ್ಟ ಕೆಲಸಗಳನ್ನು ಮಾಡದಿರುವುದು ಅದೇ ರೀತಿ ನಮ್ಮ ಸುತ್ತಮುತ್ತಲೂ ಇರುವ ಎಲ್ಲ ಸರ್ವ ಧರ್ಮದ ಜನಾಂಗವನ್ನು ಸಹೋದರತ್ವದ ಭಾವನೆಯಿಂದ ಕಾಣುವುದು. ಮಾನವೀಯ ಮೌಲ್ಯಗಳನ್ನು ಬದುಕಿನುದ್ದಕ್ಕೂ ಅಳವಡಿಸಿಕೊಂಡು ಸಾಗುವುದು ರಂಜಾನ್ ಹಬ್ಬದ ಪ್ರಧಾನ ತಿರುಳಾಗಿದೆ ಎಂದು ಧರ್ಮ ಭೋಧಕರಾದ ಎಂ.ಡಿ ಮಸೂದ್ ಭೋಧನೆ ನೀಡಿದರು.

ಒಡೆದ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ; ಶಾಸಕ-ಸಚಿವರ ವಿರುದ್ಧ ಬಸವರಾಜ ಕ್ಯಾವಟರ್ ಆಕ್ರೋಶ



ಕೊಪ್ಪಳ:

ತಾಲೂಕಿನ ಮುನಿರಾಬಾದ ಸಮೀಪದ ಬಸಾಪುರ ಹಾಗೂ ಬಂಡಿ ಹರ್ಲಾಪುರ ಗ್ರಾಮಗಳ ನಡುವಿನ 13ನೇ ಮೈಲಿಯ ವ್ಯಾಪ್ತಿಯ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ಒಡೆದ ಸ್ಥಳಕ್ಕೆ ಬುಧವಾರ ಕೊಪ್ಪಳ ಲೋಕಸಭಾ ಕ್ಷೇತ್ರದ ನಿಕಟಪೂರ್ವ ಬಿಜೆಪಿ ಅಭ್ಯರ್ಥಿ ಬಸವರಾಜ ಕ್ಯಾವಟರ್ ಸೇರಿ ಬಿಜೆಪಿ ಮುಖಂಡರು ಭೇಟಿ ನೀಡಿ ಪರಿಶೀಲಿಸಿದರು.

ಕಾಲುವೆಯಿಂದ ಅಪಾರ ಪ್ರಮಾಣದ ನೀರು ನದಿ ಪಾತ್ರಕ್ಕೆ ಹರಿದು ವ್ಯರ್ಥವಾಗಿದ್ದಲ್ಲದೇ ರೈತರ ಬೆಳೆ ಹಾಳಾಗಿರುವುದನ್ನು ನೋಡಿ ಅಸಮಾಧಾನ ವ್ಯಕ್ತಪಡಿಸಿದರು. ಅಲ್ಲದೆ, ಕಾಲುವೆ ಆಧುನೀಕರಣ ಮಾಡದ ಸರಕಾರದ ನಿರ್ಧಾರ ಖಂಡಿಸಿದರು.

ಈ ವಿಚಾರದಲ್ಲಿ ನೀರಾವರಿ ಸಲಹಾ ಸಮಿತಿ ಅಧ್ಯಕ್ಷರಾಗಿರುವ ಸಚಿವ, ಶಿವರಾಜ್ ತಂಗಡಗಿ ಹಾಗೂ ಶಾಸಕ ರಾಘವೇಂದ್ರ ಹಿಟ್ನಾಳ್ ಅವರ ನಿರ್ಲಕ್ಷ್ಯವೇ ಈ ದುರಂತಕ್ಕೆ ಕಾರಣ. ಸಕಾಲಕ್ಕೆ ಎಚ್ಚೆತ್ತುಕೊಂಡು ಕಾಲುವೆ ಕಾಮಗಾರಿ ಆಧುನೀಕರಣ ಮುಗಿಸಿದ್ದರೆ ಇಷ್ಟೊಂದು ಸಮಸ್ಯೆಯಾಗುತ್ತಿರಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ, ರೈತರೊಂದಿಗೆ ಸೇರಿ ಸ್ಥಳದಲ್ಲಿ ಪ್ರತಿಭಟನೆ ನಡೆಸಿದರು.

ತುಂಗಭದ್ರಾ ಜಲಾಶಯದಿಂದ ದಿಢೀರನೇ ನೀರಿನ ಹರಿವನ್ನು 200 ಕ್ಯೂಸೆಕ್ ದಿಂದ 2000 ಕ್ಯೂಸೆಕ್ ಗೆ ಹೆಚ್ಚಿಸಿದರ ಪರಿಣಾಮ ಈ ಸಮಸ್ಯೆ ಅನುಭವಿಸಿದೆ.

ಕಳೆದ ಮೂರು ತಿಂಗಳುಗಳ ಹಿಂದೆಯೇ ಎಡದಂಡೆ ಕಾಲುವೆಯಲ್ಲಿ ರಂಧ್ರ ಬಿದ್ದಿರುವ ಬಗ್ಗೆ ಸ್ಥಳೀಯ ಗ್ರಾಮಸ್ಥರು ಅಧಿಕಾರಿಗಳಿಗೆ ಮಾಹಿತಿ ನೀಡಿ ಸರಿಪಡಿಸಲು ಅಗ್ರಹಿಸಿದ್ದರು. ಆದರೆ, ಕಾಳಜಿ ವಹಿಸಬೇಕಾದ ಅಧಿಕಾರಿಗಳು ಕೂಡ ಈ ಸಮಸ್ಯೆಯ ಬಗ್ಗೆ ನಿರ್ಲಕ್ಷತೋರಿಸಿದರ ಪರಿಣಾಮ ಕಾಲುವೆ ಒಡೆದು ನೀರು ವ್ಯರ್ಥವಾಗುತ್ತಿದೆ ಎಂದು ಅವರು ಆರೋಪಿಸಿದ್ದಾರೆ

ಬೇಸಿಗೆ ಹಿನ್ನಲೆಯಲ್ಲಿ ಕೊಪ್ಪಳ ಹಾಗೂ ರಾಯಚೂರು ನಗರ ಪ್ರದೇಶಗಳು ಹಾಗೂ ಗ್ರಾಮೀಣ ಪ್ರದೇಶಗಳಿಗೆ ಮತ್ತು ಕೆರೆಗಳಿಗೆ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಕಾಲುವೆಗೆ ನೀರು ಹರಿಸಲಾಗುತ್ತಿತ್ತು.

ರಾಜ್ಯ ಕಾಂಗ್ರೆಸ್ ಸರಕಾರ ಮೊದಲಿಂದಲೂ ತುಂಗಭದ್ರಾ ಎಂದರೇ ತುಂಬಾ ನಿರ್ಲಕ್ಷ ತೋರಿಸುತ್ತಿರುವುದು ನಮಗೆಲ್ಲ ತಿಳಿದಿರುವ ಸಂಗತಿಯಾಗಿದೆ. ಇದೇ ಸಂಧರ್ಭದಲ್ಲಿ ಈ ಘಟನೆ ರಾಜ್ಯ ಸರಕಾರದ ನಿರ್ಲಕ್ಷಕ್ಕೆ ಮತ್ತೊಂದು ನಿದರ್ಶನವಾಗಿದೆ ಎಂದು ಕ್ಯಾವಟರ್ ಅವರು ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭ ಮಹಾಂತೇಶ್ ಪಾಟೀಲ್ ಮೈನಳ್ಳಿ, ಬಿಜೆಪಿ ನಗರ ಘಟಕ ಅಧ್ಯಕ್ಷ ಅಮರೇಶ ಮುರುಳಿ, ಪ್ರದೀಪ್ ಹಿಟ್ನಾಳ್, ಪ್ರಭುಗೌಡ ಹುಲಿಗಿ, ಗಣೇಶ ಹೊರತಟ್ನಾಳ್, ವಸಂತ ನಾಯಕ್, ರವಿ ಹೊಸಳ್ಳಿ, ಹನುಮಂತಪ್ಪ ಹುಲಿಗಿ, ಹೈದರ್ ಅಲಿ, ನರಸಿಂಹಲ್ಲು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು.

ತ್ವರಿತಗತಿಯಲ್ಲಿ ಕಾಲುವೆ ಕಾಮಗಾರಿ ಪೂರ್ಣಗೊಳಿಸಿ-ಜನಾರ್ದನ ರೆಡ್ಡಿ

ಗಂಗಾವತಿ,ಮಾ.21- ಕೊಪ್ಪಳ ತಾಲೂಕಿನ ಬಸಾಪುರ ಸಮೀಪ ತುಂಗಭದ್ರಾ ಎಡದಂಡೆ ಕಾಲುವೆಯ ಕಾಲುವೆ ಒಡೆದು ಅಪಾರ ಪ್ರಮಾಣದ ನೀರು ವ್ಯರ್ಥ ವಾಗಿ ಹರಿಯುತ್ತಿರುವುದು ಹಾಗೂ ನೂರಾರು ಎಕರೆ ಭತ್ತದ ಗದ್ದೆಗಳು ಮತ್ತು ರೆಸಾರ್ಟ್‌ಗಳಿಗೆ ನೀರು ನುಗ್ಗಿ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ ಕೂಡಲೆ ಅಧಿಕಾರಿಗಳು ಕಾಲುವೆಯ ಕಾಮಗಾರಿ ಪೂರ್ಣಗೊಳಿಸ ಬೇಕೆಂದು ಶಾಸಕ ಗಾಲಿ ಜನಾರ್ದನ ರೆಡ್ಡಿ ಒತ್ತಾಯಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು ದಶಕಗಳಿಂದ ಕಾಲುವೆಗಳ ಸಮರ್ಪಕ ನಿರ್ವಹಣೆ ಇಲ್ಲದಿರುವುದರಿಂದ ಇಂತಹ ದುರ್ಘಟನೆಗಳು ಮರುಕಳಿಸುತ್ತಿ ರುವುದು ಗಂಭೀರ ಆತಂಕಕ್ಕೆ ಕಾರಣವಾಗಿದೆ. ತುಂಗಭದ್ರಾ ಜಲಾಶಯದಲ್ಲಿ ಕ್ರಸ್ಟ್ ಗೇಟ್ ಅಳವಡಿಕೆ ನಡೆಯುತ್ತಿರುವ ಈ ಸಂದರ್ಭವನ್ನು ಸದುಪಯೋಗಪಡಿಸಿಕೊಂಡು ಕಾಲುವೆಗಳ ಸಮಗ್ರ ದುರಸ್ತಿ ಕಾರ್ಯ ಕೈಗೊಳ್ಳಬೇಕಾಗಿದ್ದರೂ, ಸರ್ಕಾರವು ನಿರ್ಲಕ್ಷ್ಯ ವಹಿಸಿರುವುದು ವಿಷಾದನೀಯ ಎಂದು ತಿಳಿಸಿದದ್ದಾರೆ. ಕುಡಿಯುವ ನೀರಿನ ಕೊರತೆ ಹಾಗೂ ಕೃಷಿ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ. ಆದ್ದರಿಂದ ನೀರಾವರಿ ಇಲಾಖೆಯ ಅಧಿಕಾರಿಗಳು ತಕ್ಷಣ ವೇ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿ ಯನ್ನು ಸಮಗ್ರವಾಗಿ ಪರಿಶೀಲಿಸಿ, ಹಾನಿಗೊಳಗಾದ ಪ್ರದೇಶಗಳಲ್ಲಿ ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಜೊತೆಗೆ ಕಾಲುವೆ ದುರಸ್ತಿ ಕಾರ್ಯವನ್ನು ಯುದ್ಧೋ ಪಾದಿಯಲ್ಲಿ ಕೈಗೊಂಡು ಪೂರ್ಣಗೊಳಿಸುವಂತೆ ಒತ್ತಾಯಿಸಿದ್ದಾರೆ.

9 ಲಕ್ಷ 78 ಸಾವಿರ ರೂ. ಮೌಲ್ಯದ 15 ಬೈಕ್ ವಶ : ಓರ್ವನ ಬಂಧನ



ಭಾಲ್ಕಿ,

ಒಳ ಮೀಸಲಾತಿ ವರ್ಗೀಕರಣ ತಡೆದು, ಹಳೆಯ ಪದ್ಧತಿಯ ಮೀಸಲಾತಿಯೇ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪಾಪವ್ವಾ ಚೌಕ್ ಮೂಲಕ ಪಾಪವ್ವ ದೇವಿಯ ಪ್ರತಿಮೆಗೆ ಪೂಜೆ ಸಲ್ಲಿಸಿ ಪ್ರಾರಂಭವಾದ ಪ್ರತಿಭಟನಾ ಮೆರವಣಿಗೆಯು ಮಹಾತ್ಮಾ ಗಾಂಧಿ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ತಹಸೀಲ್ದಾರ್ ಕಚೇರಿಯಲ್ಲಿ ಸಮಾವೇಶ ಗೊಂಡಿತು. ಪ್ರತಿಭಟನೆಯುದ್ದಕ್ಕೂ ಒಳಮೀಸಲಾತಿ ವಿರುದ್ಧ ಘೋಷಣೆಗಳು ಕೂಗಲಾಯಿತು.

ತಹಸೀಲ್ದಾರ್ ಅವರ ಮೂಲಕ ರಾಜ್ಯಪಾಲ ಹಾಗೂ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ, ಕರ್ನಾಟಕದಲ್ಲಿಯ ಬಂಜಾರ, ಭೋವಿ, ಲಮಾಣಿ, ಕೊರಮ, ಕೊಂಚ, ಜಾಂಬವ, ವಡ್ಡರ, ಹೊಲೆಯ, ಛಲವಾದಿ, ಚರ್ಮಕಾರ ಸೇರಿದಂತೆ 101 ಸೂಕ್ಷ್ಮ ಜಾತಿಗಳು ಪರಿಶಿಷ್ಟ ಜಾತಿಗಳ

ಪಟ್ಟಿಯಲಿವೆ. ಆದರೆ ಕರ್ನಾಟಕ ರಾಜ್ಯದಲ್ಲಿ ಒಳಮೀಸಲಾತಿ ಹೆಸರಿನಲ್ಲಿ ಇತ್ತೀಚಿಗೆ ನಡೆದ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿಗಳ ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ಗುಂಪಿಗೆ ಶೂನ್ಯ ಹುದ್ದೆಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ಛಲವಾದಿ, ಬಂಜಾರ, ಭೋವಿ, ಕೊರಮ, ಕೊರಚ, ವಡ್ಡರ, ಕೊಂಚ, ಬುರುಬುರ ಪೋಚಮ್ಮ ಸೇರಿದಂತೆ 70ಕ್ಕೂ ಹೆಚ್ಚು ಜಾತಿಗಳಿಗೆ ಘೋರ ಅನ್ಯಾಯವಾಗಿದೆ. ಕಾರಣ ಸರ್ಕಾರ ಹಳೇ ಮೀಸಲಾತಿಯ ನಿಯಮದಂತೆ ಶೇ.50ರ ಅನ್ವಯ ನೇಮಕಾತಿ ಮತ್ತು ಶೈಕ್ಷಣಿಕ ಪ್ರವೇಶ ಪ್ರಕ್ರಿಯೆಯನ್ನು ಮುಂದುವರಿಸಬೇಕು. ಇದಕ್ಕೆ ತ್ವರಿತವಾಗಿ ನೇಮಕಾತಿ ಅಧಿಸೂಚನೆ ಹೊರಡಿಸಬೇಕು. ಈ ಹಿಂದೆ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಹೆಚ್ಚಳ ಮಾಡಿರುವ ಆದೇಶವನ್ನು ಸಂವಿಧಾನದ 9ನೇ ಷೆಡ್ಯೂಲ್‌ನಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಲಿಕೊಡಲು ಪ್ರಧಾನಮಂತ್ರಿಗಳ ಹತ್ತಿರ ನಿಯೋಗ ಹೋಗಿ, ಕೇಂದ್ರದ ಮೇಲೆ ಒತ್ತಡ ಹೇರಬೇಕು ಎಂದು ಒತ್ತಾಯಿಸಲಾಗಿದೆ.

ಏಕಪಕ್ಷೀಯವಾಗಿ ಒಳಮೀಸಲಾತಿ ವರ್ಗೀಕರಣ ನಿರ್ಧಾರ ಮಾಡಬಾರದು. ಪರಿಶಿಷ್ಟ ಜಾತಿ ಪ್ರವರ್ಗ ಎ, ಬಿ ಮತ್ತು ಸಿ ಎಂದು ನಮೂದಿಸಿದ ಜಾತಿ ಪ್ರಮಾಣಪತ್ರಗಳು ಹಿಂಪಡೆಯಬೇಕು ಎಂದು ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ಕರ್ನಾಟಕ ಪ್ರದೇಶ ಬಂಜಾರಾ ಸೇವಾ ಸಂಘದ ಅದ್ಯಕ್ಷ ವಿಲಾಸ್ ರಾಠೋಡ್, ಕರ್ನಾಟಕ ಪ್ರದೇಶ ಬಂಜಾರಾ ಸೇವಾ ಸಂಘದ ಜಿಲ್ಲಾ ಉಪಾಧ್ಯಕ್ಷ ಸುಭಾಷ್ ಚವ್ಹಾಣ, ಸುಭಾಷ್ ಆಡೆ, ಭೋವಿ ವಡ್ಡರ ಸಮಾಜದ ಸಂಜೀವ್ ಸಿಂಧೆ, ರಾಜಕುಮಾರ್ ಸಿಂಧೆ, ವೆಂಕಟ್ ಸಿಂಧೆ, ದತ್ತು ಪವಾರ್, ಪ್ರಕಾಶ್ ಸಂಪಂಗೆ, ಸುರೇಶ್ ಚವ್ಹಾಣ, ಚಂದು ಸಂಪಂಗೆ, ಸಂಜು ಸಿಂದೆ, ಪ್ರಮುಖರಾದ ಸಿದ್ದಪ್ಪ ಪೋಚಮ್ಮ, ಸಂತೋಷ ಮಾನೆ, ಪ್ರಕಾಶ್ ಯದವಾ, ಜಗನ್ನಾಥ್ ಸಂಪಂಗೆ, ಲಾಲು ರಾಮಲೆ, ರಂಗಲಾಲ್ ಜಾಧವ್, ವಿಶ್ವನಾಥ್ ಸಂಪಂಗೆ, ನಾಗನಾಥ್ ಸಂಪಂಗೆ, ಸುನೀಲ್ ಬುಡ್ಡಣ್ಣ, ವಿಲಾಸ್ ರಾಠೋಡ್, ಸುಭಾಷ್ ರಾಠೋಡ್, ಮಾನಾಜಿ ಚವ್ಹಾಣ, ವಿಜಯಕುಮಾರ್ ಜಾಧವ್, ಸಂತೋಷ್ ಮಾನೆ, ಮುಕೇಶ್ ಚವ್ಹಾಣ ಹಾಗೂ ಬಸವರಾಜ್ ಸಂಪಂಗೆ ಸೇರಿದಂತೆ ನೂರಾರು ಜನ ಭಾಗವಹಿಸಿದ್ದರು.



ಶ್ರೀ ಉರುಕುಂದಿ ಈರಣ್ಣ ಸ್ವಾಮಿ ದೇವಸ್ಥಾನದಲ್ಲಿ ಅನ್ನದಾಸೋಹ

ಸಿರುಗುಪ್ಪ,

ನಗರದ 16ನೇ ವಾರ್ಡಿನಲ್ಲಿರುವ ಶ್ರೀ ಉರುಕುಂದಿ ಈರಣ್ಣ ಸ್ವಾಮಿ ದೇವಸ್ಥಾನದಲ್ಲಿ ಮಾರ್ಚ್ 18ರಂದು ಅನ್ನದಾಸೋಹ ಕಾರ್ಯಕ್ರಮ ಜರುಗಿತು.

ಯುಗಾದಿ ಅಮವಾಸ್ಯೆ ನಿಮಿತ್ತ ದೇವಸ್ಥಾನದಲ್ಲಿ ಬೆಳಿಗ್ಗೆಯಿಂದಲೇ ಶ್ರೀ ಉರುಕುಂದಿ ಸ್ವಾಮಿಗೆ ಪಂಚಾಮೃತಾಭಿಷೇಕ, ಅರಿಶಿಣ ಕುಂಕುಮ ಅಲಂಕಾರ, ಮಹಾ ಮಂಗಳಾರತಿ, ಫಲಕ್ಕಿ ಸೇವೆ, ಮದ್ಯಾಹ್ನ ಪ್ರಸಾದದಂತಹ ಧಾರ್ಮಿಕ ಕಾರ್ಯಕ್ರಮಗಳು ಜರುಗಿದ್ದು, ಹಲವಾರು ಭಕ್ತರು ಭಾಗಿಯಾಗಿ ಹರಕೆ ಸಲ್ಲಿಸಿದರು.

ಅರ್ಚಕ ಶರಣಯ್ಯ ಸ್ವಾಮಿ ಮಾತನಾಡಿ ಪ್ರತಿ ಅಮವಾಸ್ಯೆಯು ಸ್ವಾಮಿಯ ದೇವಸ್ಥಾನದಲ್ಲಿ ದಾಸೋಹ ನಡೆಯುತ್ತಿದೆ. ದೇಶ ರಕ್ಷಣೆಗೈಯುತ್ತಿರುವ ನಮ್ಮ ಯೋಧರಿಗೆ ಉತ್ತಮ ಆರೋಗ್ಯ, ಈ ವರ್ಷ ಉತ್ತಮ ಮಳೆಯಾಗಿ ದೇಶಕ್ಕೆ ಅನ್ನ ನೀಡುವ ಅನ್ನದಾತರ ಒಳಿತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು ಎಂದು ತಿಳಿಸಿದರು.

ದೇವಸ್ಥಾನ ಸೇವಾ ಸಮಿತಿಯ ಸದಸ್ಯರಾದ ಹೆಚ್.ರಂಗನಾಥಶೆಟ್ಟಿ ಮಾತನಾಡಿ ಈ ಅಮವಾಸ್ಯೆಯಂದು ಉಮಾಮಹೇಶ್ವರ ಅಕ್ಕಿಗಿರಣಿ ಮಾಲೀಕರಾದ ಜಿ.ಎಸ್.ಆರ್ ಶ್ರೀನಿವಾಸ ಕುಟುಂಬದವರು ಅನ್ನದಾಸೋಹ ಅನ್ನದಾಸೋಹ ಸೇವೆಗೈದಿದ್ದಾರೆ. ದೇವಸ್ಥಾನ ಅಭಿವೃದ್ದಿ ಸೇವಾ ಸಮಿತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು ಎಂದು ತಿಳಿಸಿದರು.

ಇದೇ ವೇಳೆ ದೇವಸ್ಥಾನ ಸೇವಾ ಸಮಿತಿ ಅಧ್ಯಕ್ಷ ಸುರೇಶರೆಡ್ಡಿ, ಉಪಾಧ್ಯಕ್ಷ ಎಳ್ಳಾರ್ತಿ ವೀರೇಶ ನಾಯಕ, ಮಲ್ಲಿಕಾರ್ಜುನ, ಸುಂಕಪ್ಪ, ಗಣೇಶ, ವೀರೇಶಶೆಟ್ಟಿ, ನಾಗಯ್ಯಸ್ವಾಮಿ ಹಾಗೂ ಭಕ್ತರು ಇದ್ದರು.

ರಾಷ್ಟ್ರೀಯ ರೇಬೀಸ್ ನಿಯಂತ್ರಣ ಕಾರ್ಯಕ್ರಮ



ಕೊಪ್ಪಳ ವ.21,

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಘಟಕ, ಕೊಪ್ಪಳ ಹಾಗೂ ಸಮುದಾಯ ಆರೋಗ್ಯ ಕೇಂದ್ರ ಕನಕಗಿರಿ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಿರವಾರ ಇವರ ಸಂಯುಕ್ತಾಶ್ರಯದಲ್ಲಿ ಮಾರ್ಚ್ 16 ರಂದು ಶಾಲಾ ಸಭಾ ಭವನದಲ್ಲಿ ರಾಷ್ಟ್ರೀಯ ರೇಬೀಸ್ ನಿಯಂತ್ರಣ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವ್ಹಿ.ಪಿ. ಅವರು ಮಾತನಾಡಿ, ನಾಯಿ ಕಡಿತದಿಂದ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು. ರೇಬೀಸ್ ಒಂದು ವೈರಸ್ ಆಗಿದ್ದು, ಸೋಂಕಿತ ಪ್ರಾಣಿಗಳು ಮನುಷ್ಯರಿಗೆ ಕಚ್ಚುವುದರಿಂದ ಹರಡುತ್ತದೆ. ಹೆಚ್ಚು ಪ್ರಮಾಣದಲ್ಲಿ ಬೀದಿನಾಯಿಗಳ ಕಡಿತದಿಂದ ಬರುವ ಸಾಧ್ಯತೆ ಇರುತ್ತದೆ. ಒಂದುವೇಳೆ ನಾಯಿ ಕಚ್ಚಿದರೆ ತಕ್ಷಣ ಕಚ್ಚಿದ ಜಾಗವನ್ನು ಸೋಪು ಮತ್ತು ಶುದ್ಧ ಹರಿಯುವ ನಲ್ಲಿ(ನಳ) ನೀರಿನಲ್ಲಿ 15 ನಿಮಿಷ ತೊಳೆಯಬೇಕು. ಕಚ್ಚಿದ ಜಾಗಕ್ಕೆ ಸ್ಥಳೀಯವಾಗಿ ಲಭ್ಯವಿರುವ ನಂಜು ನಿರೋಧಕ ಔಷಧಿ ಲಭ್ಯವಿದ್ದರೆ ಹಚ್ಚಿರಿ. ಕಚ್ಚಿದ ಜಾಗವನ್ನು ಬ್ಯಾಂಡೇಜ್ ಅಥವಾ ಯಾವುದೇ ರೀತಿಯ ಬಟ್ಟೆಯಿಂದ ಮುಚ್ಚಬೇಡಿ, ಕಚ್ಚಿದ ಜಾಗಕ್ಕೆ ಕೆಸರು, ಹಸುವಿನ ಸಗಣೆ, ಕಾಫಿಪುಡಿ, ಮೆಣಸಿನಪುಡಿ, ಸುಣ್ಣ ಇಂತಹ ಪದಾರ್ಥ ಹಚ್ಚಬೇಡಿ. ಎಲ್ಲಾ ನಾಯಿಗಳಿಗೆ ಪಶು ಸಂಗೋಪನಾ ಇಲಾಖೆಯಿಂದ ನೀಡುವ ಚುಚ್ಚುಮದ್ದನ್ನು ತಪ್ಪದೇ ನಿರಂತರವಾಗಿ ಹಾಕಿಸಬೇಕು. ನಾಯಿ ಅಥವಾ ಯಾವುದೇ ಪ್ರಾಣಿ ಕಡಿತವಾದಲ್ಲಿ

ತಕ್ಷಣ ನಿಮ್ಮ ಹತ್ತಿರದ ಸಮುದಾಯ ಆರೋಗ್ಯ ಕೇಂದ್ರ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಾರ್ವಜನಿಕ ಆಸ್ಪತ್ರೆ, ಜಿಲ್ಲಾ ಆಸ್ಪತ್ರೆ, ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ, ಚಿಕಿತ್ಸೆ ಪಡೆದುಕೊಳ್ಳಬೇಕು. ನಾಯಿ ಕಡಿತದ ಬಗ್ಗೆ ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ಮಾಡಬಾರದು ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ರೇಬೀಸ್ ತಡೆಗಟ್ಟುವ ಲಸಿಕೆ(ಎ.ಆರ್.ವಿ) ಮತ್ತು ರೇಬಿಸ್ ಇಮ್ಯುನೊ ಗ್ಲೋಬ್ಯುಲಿನ್ (ಆರ್.ಐ.ಜಿ) ಚಿಕಿತ್ಸೆ ಉಚಿತವಾಗಿ ನೀಡಲಾಗುತ್ತದೆ ಎಂದು ತಿಳಿಸಿದರು.

ಸಾಂಕ್ರಾಮಿಕ ರೋಗಶಾಸ್ತ್ರಜ್ಞರಾದ ಡಾ.ಮಾಧವಿ ಅವರು ಹಾವು ಕಡಿತ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಹಾಗೂ ಬೇಸಿಗೆ ಸಮಯದಲ್ಲಿ ಅನುಸರಿಸಬೇಕಾದ ಮುಂಜಾಗ್ರತ ಕ್ರಮಗಳು, ಎಚ್.ಪಿ.ವಿ ಲಸಿಕೆ, ವೈಯಕ್ತಿಕ ಸ್ವಚ್ಛತೆ ಕುರಿತು ವಿವರವಾಗಿ ಮಾತನಾಡಿದರು. ಆರೋಗ್ಯ ನಿರೀಕ್ಷಣಾಧಿಕಾರಿ ರಮೇಶ ಕ್ಷಯರೋಗ ನಿರ್ಮೂಲನೆ, ಕುಷ್ಠರೋಗ ನಿರ್ಮೂಲನೆ ಹಾಗೂ ಸೋಂಕಿತ ಸೊಳ್ಳೆಗಳಿಂದ ಹರಡುವ ರೋಗಗಳ ನಿಯಂತ್ರಣ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ನೂರಜಾನ ಬೇಗಂ, ಸಹಾಯಕ ಆರೋಗ್ಯ ಅಧಿಕಾರಿ ನಾಗರಾಜರೆಡ್ಡಿ, ಅಂಗನವಾಡಿ ಕಾರ್ಯಕರ್ತೆಯರು, ಶಾಲಾ ಶಿಕ್ಷಕರು, ಗ್ರಾಮ ಪಂಚಾಯತಿಯ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಸ್ತ್ರೀ ಘನತೆ ಅಗ್ಗದ ವಸ್ತುವಲ್ಲ ; ವಾಣಿಜ್ಯ

ಜಯಮಾಲಾ ಅವರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆಯಾಗಿ ಎರಡು ತಿಂಗಳಾಗುತ್ತಿದೆ. ನಟಿಯಾಗಿ/ನಿರ್ಮಾಪಕಿಯಾಗಿ/ಮಂಡಳಿಯ ಅಧ್ಯಕ್ಷೆಯಾಗಿ ಕನ್ನಡ ಸಿನಿಮಾ ನಿರ್ಮಾಪಕರು, ನಿರ್ದೇಶಕರಿಗೆ ಸ್ಪಷ್ಟ ಸಂದೇಶ ನೀಡಬೇಕಿದೆ. ಅದಕ್ಕೆ ಪ್ರೇಮ್ ಪ್ರಕರಣವೇ ನಾಂದಿಯಾಗಲಿ.

ಸಿನಿಮಾದಲ್ಲಿ ಹೆಣ್ಣನ್ನು ಭೋಗದ ವಸ್ತುವನ್ನಾಗಿ ಬಿಂಬಿಸುವ ವ್ಯಸನ ಹೊಸದೇನಲ್ಲ. ಹೆಣ್ಣಿನ ಅಂಗಾಂಗ ಪ್ರದರ್ಶನ, ದ್ವಂದ್ವಾರ್ಥದ ಹಾಡು, ಸಂಭಾಷಣೆ, ಸಂಜ್ಞೆಗಳು ಪಡ್ಡೆ ಹುಡುಗರನ್ನು ಸೆಳೆಯಲು ಹೆಣ್ಣನ್ನು ವಸ್ತುವಾಗಿ ಬಳಕೆ ಮಾಡೋದು ಭಾರತದ ಸಿನಿಮಾ ಪರಂಪರೆಯಲ್ಲಿ ಥಾಳಾಗಿ ಕಾಣ ಸಿಗುತ್ತದೆ. ಹಾಗೆ ನೋಡಿದರೆ ಮಡಿವಂತ ಸಮಾಜದಲ್ಲಿ ಮನರಂಜನಾ ಕ್ಷೇತ್ರದ ಈ ಸ್ತ್ರೀ ಘನತೆಯ ಹರಣದ ಬಗ್ಗೆ ಹೆಚ್ಚಿನ ವಿರೋಧ ವ್ಯಕ್ತವಾಗಿಲ್ಲ ಎಂಬುದಕ್ಕೆ ಕಾರಣ ಕೂಡ ಪುರುಷ ಪ್ರಧಾನ ದಬ್ಬಾಳಿಕೆಯ ಪ್ರಭಾವವೇ ಆಗಿತ್ತು. ತೊಂಭತ್ತರ ದಶಕದವರೆಗೂ ಅಶ್ಲೀಲ ಹಾಡು ಕುಣಿತಕ್ಕೆಂದು ಕ್ಯಾಬರೆ ನರ್ತಕಿಯರನ್ನು ಸಿನಿಮಾಗಳಲ್ಲಿ ಬಳಸಲಾಗುತ್ತಿತ್ತು. ಆ ಜಾಗವನ್ನು ನಾಯಕಿ ನಟಿಯರೇ ತುಂಬಿದ್ದಾರೆ ಎಂಬುದು ಈ ನಾಲ್ಕು ದಶಕದ ಬೆಳವಣಿಗೆ. ಅದು ಬಿಟ್ಟರೆ ಮನರಂಜನಾ ಕ್ಷೇತ್ರದಲ್ಲಿ ಹೆಣ್ಣನ್ನು ಮಾರುಕಟ್ಟೆ ಸರಕಾಗಿ ಎರಡನೇ ದರ್ಜೆಯ ವ್ಯಕ್ತಿಯನ್ನಾಗಿ ನೋಡುವ ನೋಟ ಬದಲಾಗಲೇ ಇಲ್ಲ. ಭಾರತದ ಸಿನಿಮಾ ಕ್ಷೇತ್ರದಲ್ಲಿ ಅಭಿಯಾನ ಶುರುವಾಗಿದ್ದೇ ಕಳೆದು ಒಂದು ದಶಕದ ಬೆಳವಣಿಗೆ. ಅಲ್ಲಿಯವರೆಗೆ ನಟಿಯರು ಎಲ್ಲ ನೋವುಗಳನ್ನು ನುಂಗಿ ನಡೆದಿದ್ದಾರೆ.ಮಾಸ್ ಸಿನಿಮಾ ಅಂದ್ರೆ, ಮಚ್ಚು, ಲಾಂಗು, ರಕ್ತದಷ್ಟೇ ಸಾಮಾನ್ಯ ಹೆಣ್ಣಿನ ಅಂಗಪ್ರದರ್ಶನ ಎಂಬಂತಾಗಿದೆ. ಈಗ ಪ್ರತಿಯೊಬ್ಬರಿಗೂ ಸಾಮಾಜಿಕ ಮಾಧ್ಯಮ ಎಂಬ ಪ್ರಬಲ ಅಸ್ತ್ರ ಸಿಕ್ಕ ನಂತರ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ, ಲೈಂಗಿಕ ಶೋಷಣೆಯನ್ನು ಅಷ್ಟೇ ಬಲವಾಗಿ ಖಂಡಿಸಲು ವೇದಿಕೆ ಲಭಿಸಿದೆ. ಇತ್ತೀಚೆಗೆ ಕನ್ನಡದ ಸಿನಿಮಾದ ಹಾಡೊಂದು ವಿವಾದಕ್ಕೆ ಗುರಿಯಾದ ಎರಡೇ ದಿನಕ್ಕೆ ಹಾಡನ್ನು ಅಳಿಸಿ ಬೇರೆ ಹಾಡು ಬರೆಯಬೇಕಾದ ಸಂದರ್ಭ ಸೃಷ್ಟಿಯಾಗಿದೆ. ಪ್ರೇಮ್ ನಿರ್ದೇಶನದ ಕೆಡಿ ದ ಡೆವಿಲ್ ಸಿನಿಮಾದ ''ಸೆರ್ಗ ಸರ್ಸೇ'' ಹಾಡು ವ್ಯಾಪಕ ಖಂಡನೆಗೆ ಗುರಿಯಾಗಿದೆ. ಬಾಲಿವುಡ್ ಮಂದಿ ಕೂಡ ಟೀಕಿಸಿದ್ದರು. ಕಳೆದ ಬುಧವಾರ ನಿರ್ದೇಶಕ ಪ್ರೇಮ್ ಹಾಡು ಬದಲಿಸುವ ಮಾತಾಡಿದ್ದಾರೆ. ಆದರೆ, ತಮ್ಮ ಅಭಿಪ್ರಾಯ ಹಂಚಿಕೊಂಡ ವಿಡಿಯೋದ ಉದ್ದಕ್ಕೂ ''ನಾನು ನನ್ನ ದೃಷ್ಟಿಕೋನದಲ್ಲಿ ಬರೆದೆ'' ಅಂತ ನಾಲ್ಕಾರು ಬಾರಿ ಹೇಳಿದ್ದಾರೆ. ಆ ಮೂಲಕ ತಮ್ಮ ದೃಷ್ಟಿಕೋನವೇ ಅಶ್ಲೀಲ ಎಂದು ಸಾರಿದಂತೆ ಅವರ ಮಾತುಗಳಿದ್ದವು. ಕ್ಷಮೆ ಕೇಳುವಾಗಲೂ ಅವರಿಗೆ ತಪ್ಪಿನ ಅರಿವಾದಂತೆ ಅಥವಾ ಹೆಣ್ಣುಮಕ್ಕಳಿಗೆ ಅವಮಾನವಾಗಿದೆ ಎಂಬ ಭಾವನೆ ಅವರಲ್ಲಿ ಇದ್ದಂತಿಲ್ಲ.



ರಾಜಕಾರಣಿಗಳು, ಅಧಿಕಾರಿಗಳು, ಸಿನಿಮಾ ಕಲಾವಿದರು ಹೀಗೆ ಹಲವರು ಮಾನಹಾನಿಕರ ಹೇಳಿಕೆ ನೀಡಿದಾಗ, ಹೆಣ್ಣುಮಕ್ಕಳ ಘನತೆಗೆ ಧಕ್ಕೆ ತರುವ ಮಾತು, ಹಾಡು, ಸಾಹಿತ್ಯ ರಚನೆಯ ನಂತರ ವಿವಾದ ಉಂಟಾದಾಗ ಯಾರಿಗಾದರೂ ''ನೋವಾಗಿದ್ದರೆ ಕ್ಷಮೆ ಕೇಳುತ್ತೇವೆ'' ಎಂದು ಹೇಳುತ್ತಾರೆ. ''ಹೌದು ನನ್ನಿಂದ ತಪ್ಪಾಗಿದೆ. ಒಬ್ಬ ಹೆಣ್ಣಿಗೆ ಅಥವಾ ಇಡೀ ಹೆಣ್ಣುಕುಲಕ್ಕೆ ಅವಮಾನವಾಗಿದೆ'' ಎಂದು ಹೃದಯದಿಂದ ಪಶ್ಚತ್ತಾಪಪಟ್ಟು ಮುಕ್ತ ಮನಸ್ಸಿ ನಿಂದ ಕ್ಷಮೆ ಕೇಳುವ ಮನಸ್ಥಿತಿಯೂ ಇಲ್ಲ. ಇದು ಸ್ಪಷ್ಟವಾಗಿ ಗಂಡಾಳಿಕೆಯ ಅಹಂಕಾರ. ತಾನು ತಪ್ಪು ಮಾಡಿದ್ದರೂ ಒಪ್ಪಿಕೊಳ್ಳದ ನಡವಳಿಕೆ ನಿಜಕ್ಕೂ ಅಕ್ಷಮ್ಯ.

ನಿರ್ದೇಶಕ ಪ್ರೇಮ್ ''ಸರ್ಸೇ ಸೆರಗ ಸರ್ಸೇ'' ಎಂಬ ಹಾಡು ಬಿಡುಗಡೆ ಮಾಡಿದಾಗ ಭಾರೀ ಟೀಕೆ ವ್ಯಕ್ತವಾಗಿ ಮಹಿಳಾ ಆಯೋಗಕ್ಕೂ ದೂರು ಸಲ್ಲಿಕೆಯಾಯಿತು. ಮಹಿಳಾ ಆಯೋಗ ಪ್ರೇಮ್‌ಗೆ ಮಾರ್ಚ್ 23ರಂದು ಖುದ್ದು ಹಾಜರಾಗಿ ವಿವರಣೆ ನೀಡಲು ನೋಟಿಸ್ ನೀಡಿದೆ. ಬಾಲಿವುಡ್ ನಟಿ ಕಂಗನಾ ಕೂಡ ಅಸಮಾಧಾನ ಹೊರ ಹಾಕಿದ್ರು. ಹಿಂದಿಯಲ್ಲೂ ಚಿತ್ರೀಕರಣ ಆಗಿದ್ದ ಆ ಹಾಡಿನಲ್ಲಿ ನಟಿಸಿದ್ದ ಬಾಲಿವುಡ್ ನಟಿ ನೋರಾ ಕೂಡಾ ಅಸಮಾಧಾನ ಹೊರ ಹಾಕಿದ ನಂತರ ಪ್ರೇಮ್ ಮಾಧ್ಯಮಗಳ ಮುಂದೆ ಬಂದು ಹಾಡು ಬದಲಿಸುವ ಮಾತಾಡಿದ್ದಾರೆ. ಮನಪೂರ್ವಕ ಕ್ಷಮೆ ಕೇಳುವ ಮನಸ್ಸು ಮಾಡಿಲ್ಲ.ಕ್ಷಮೆ ಕೇಳಿ ಬಚಾವ್ ಆಗುವ ದಾರಿ ಬಹಳ ಸುಲಭವಿದೆ. ಆದರೆ, ಹೆಣ್ಣುಮಕ್ಕಳ ಆತ್ಮಗೌರವ ಅಷ್ಟು ಅಗ್ಗವಾಗಿ ಹೋಯಿತೇ? ಸಮಾಜಕ್ಕೆ ಎಂತಹ ಸಂದೇಶ ಕೊಡಲು ಹೊರಟಿದ್ದಾರೆ? ಹಣದ ಥೈಲಿ ತುಂಬಿಸಿಕೊಳ್ಳುವುದು ಬಿಟ್ಟರೆ ಯಾವ ನೈತಿಕ ಜವಾಬ್ದಾರಿಯೂ ಇಲ್ಲವೇ? ಈ ಪ್ರಕರಣ ಪ್ರೇಮ್ ಅವರಂತಹ ಇತರರಿಗೆ ಪಾಠವಾಗಬೇಕು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಈಗ ಹಿರಿಯ ನಟಿ ಜಯಮಾಲಾ ಅಧ್ಯಕ್ಷೆ. ಆ ಸ್ಥಾನದಲ್ಲಿ ಮಹಿಳೆಯೊಬ್ಬರು ಇರುವ ಕಾರಣಕ್ಕೆ ಅವರಿಂದ ತೀವ್ರತರವಾದ ಕ್ರಮವನ್ನು ನಾಡಿನ ಹೆಣ್ಣುಮಕ್ಕಳು ಬಯಸಿದ್ದರು. ಆದರೆ ಅವರು ನಿರಾಶೆಗೊಳಿಸಿದ್ದಾರೆ.

ಕರ್ನಾಟಕದಲ್ಲಿ ಸಿನಿಮಾ ಮತ್ತು ಕಿರುತೆರೆಯಲ್ಲಿ ದುಡಿಯುವ ಹೆಣ್ಣುಮಕ್ಕಳಿಗೆ ಲೈಂಗಿಕ ಕಿರುಕುಳ ತಡೆಯಲು ದೂರು ಸಮಿತಿಯೇ ಇಲ್ಲ. ಹತ್ತಕ್ಕಿಂತ ಹೆಚ್ಚು ಮಹಿಳೆಯರು ದುಡಿಯುವ ಜಾಗಗಳಲ್ಲಿ ಕಮಿಟಿ ಇರಬೇಕು ಎಂಬ ((, ,), 2013) ನಿಯಮವನ್ನೇ ಕರ್ನಾಟಕ ಚಲನಚಿತ್ರ ವಾಣಿಜ್ಯಮಂಡಳಿ ಇದುವರೆಗೆ ಪಾಲಿಸಿರಲಿಲ್ಲ. ಎರಡು ವರ್ಷಗಳ ಹಿಂದೆ ಕೇರಳದಲ್ಲಿ ಹೇಮಾ ಕಮಿಟಿ ಅಲ್ಲಿನ ಸಿನಿಮಾ ರಂಗದ ಸ್ತ್ರೀ ಶೋಷಣೆಯ ಕರಾಳ ಮುಖವನ್ನು ಅನಾವರಣ ಮಾಡಿದ ಮೇಲೆ ದಕ್ಷಿಣದ ಹಲವು ಭಾಷೆಗಳ ನಟಿಯರು ತಮ್ಮ ರಾಜ್ಯದಲ್ಲೂ ಇಂತಹದೊಂದು ಅಧ್ಯಯನ ನಡೆಸಬೇಕು ಎಂದು ಒತ್ತಾಯಿಸಿದ್ದರು. ಕರ್ನಾಟಕದಲ್ಲೂ ಹೇಮಾ ಕಮಿಟಿ ರೀತಿಯಲ್ಲಿ ಕಮಿಟಿ ಸ್ಥಾಪಿಸಬೇಕು ಎಂದು ಮಹಿಳಾ ಆಯೋಗಕ್ಕೆ ಒತ್ತಡ ಬಂದಾಗ ವಾಣಿಜ್ಯ ಮಂಡಳಿಯಲ್ಲಿ ನಡೆದ ಸಭೆಯಲ್ಲಿ ತಕ್ಷಣಕ್ಕೆ ಕಮಿಟಿ ಮಾಡುವ ನಿರ್ಧಾರಕ್ಕೆ ಬರಲಾಯಿತು. ನಿರ್ದೇಶಕಿ ಕವಿತಾ ಲಂಕೇಶ್ ನೇತೃತ್ವದ ಕಮಿಟಿ ರಚನೆ ಮಾಡಿ ಘೋಷಣೆ ಮಾಡಿದ ಕೆಲವೇ ಗಂಟೆಗಳಲ್ಲಿ ಕಮಿಟಿಯನ್ನು ರದ್ದುಪಡಿಸಲಾಯಿತು. ವಾಣಿಜ್ಯ ಮಂಡಳಿಗೆ ಹೊಸ ಪದಾಧಿಕಾರಿಗಳ ಆಯ್ಕೆ ಇರುವ ಕಾರಣ ನೀಡಿದ್ದರು. ವಾಸ್ತವದಲ್ಲಿ ಅಲ್ಲಿದ್ದ ನಿರ್ಮಾಪಕರು, ನಿರ್ದೇಶಕರು ಭಯಬಿದ್ದು ಅಂತಹ ಕಮಿಟಿ ಸ್ಥಾಪಿಸುವುದರ ವಿರುದ್ಧ ಧ್ವನಿ

ಸಫಾಯಿ ಕರ್ಮಾಚಾರಿಗಳ ಕುರಿತ ಸರ್ಕಾರದ ನಿರ್ಲಕ್ಷ ಸರಿಯೇ?

2023ರಲ್ಲಿ ಮಲ ಹೊರುವ ಪದ್ದತಿ ನಿಷೇಧ ಹಾಗೂ ಸಫಾಯಿ ಕರ್ಮಾಚಾರಿಗಳ ಪುನರ್ವಸತಿ ಕಾಯ್ದೆ ನಡೆಸಿದ ಸಮೀಕ್ಷೆಯ ವರದಿಯಂತೆ 2013ರಲ್ಲಿ ದೇಶದ ಯಾವ ಜಿಲ್ಲೆಗಳಲ್ಲೂ ಮಲಹೊರುವ ಪದ್ದತಿ ಕಂಡುಬಂದಿಲ್ಲ ಎಂದು ಸರ್ಕಾರ ಘೋಷಿಸಿತು. ಆದರೆ, ಸಫಾಯಿ ಕರ್ಮಚಾರಿಗಳು ನೇರ ಮಲಗುಂಡಿಗೆ ಇಳಿಯದಂತೆ, ಮಲ ಹೊರದಂತೆ ಜಾರಿಗೆ ತಂದ ಕಾಯ್ದೆಗಳ ಯಾವ ನಿಯಮಗಳೂ ಪರಿಪೂರ್ಣವಾಗಿ ಇಂದಿಗೂ ಜಾರಿಗೆ ಬಂದಿಲ್ಲ.

ಗುರುವಾರ ಲೋಕಸಭೆಯಲ್ಲಿ ಇಕ್ರ ಹಸನ್ ಪ್ರಸ್ತಾಪಿಸಿದ ವರದಿಯ ಪ್ರಕಾರ 2017ರಿಂದ ಈಚೆಗೆ ಸುಮಾರು 539 ಸಫಾಯಿ ಕರ್ಮಾಚಾರಿಗಳು ಸಫಾಯಿ ಕಾರ್ಯದಲ್ಲಿ ತೊಡಗಿದ್ದಾಗ ಮೃತಪಟ್ಟಿದ್ದಾರೆ. ಅದರಲ್ಲಿ 57 ಸಂತ್ರಸ್ತ ಕುಟುಂಬಗಳಿಗೆ ಯಾವುದೇ ಪರಿಹಾರ ದೊರಕಿಲ್ಲ. 6 ಪ್ರಕರಣಗಳನ್ನು ಪರಿಗಣಿಸದೇ ಕೈಬಿಡಲಾಗಿದೆ.

ಸಮಾಜವಾದಿ ಪಕ್ಷದ ಸಂಸದೆ ಇಕ್ರ ಚೌಧರಿ ಸಫಾಯಿ ಕರ್ಮಾಚಾರಿಗಳ ಕುರಿತ ಸರ್ಕಾರದ ನಿರ್ಲಕ್ಷ್ಯವನ್ನು ಅಂಕಿ ಅಂಶಗಳ ಮುಖೇನ ಪ್ರಶ್ನಿಸಿದರು. ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಇಲಾಖೆಯ ಮುಂದೆ ಇದುವರೆಗೂ ಪ್ರಾಣ ಕಳೆದುಕೊಂಡ ಸಫಾಯಿ ಕರ್ಮಾಚಾರಿಗಳ ಪಟ್ಟಿ ಅದರಲ್ಲಿ ಪರಿಹಾರ ಸಿಗದ ಸಂತ್ರಸ್ಥರ ಕಟುಂಬಗಳ ಕುರಿತು ಕಳವಳ ವ್ಯಕ್ತಪಡಿಸಿದರು.

2023ರಲ್ಲಿ ಮಲ ಹೊರುವ ಪದ್ದತಿ ನಿಷೇಧ ಹಾಗೂ ಸಫಾಯಿ ಕರ್ಮಾಚಾರಿಗಳ ಪುನರ್ವಸತಿ ಕಾಯ್ದೆ ನಡೆಸಿದ ಸಮೀಕ್ಷೆಯ ವರದಿಯಂತೆ 2013ರಲ್ಲಿ ದೇಶದ ಯಾವ ಜಿಲ್ಲೆಗಳಲ್ಲೂ ಮಲಹೊರುವ ಪದ್ದತಿ ಕಂಡುಬಂದಿಲ್ಲ ಎಂದು ಸರ್ಕಾರ ಘೋಷಿಸಿತು. ಸಫಾಯಿ ಕರ್ಮಚಾರಿಗಳು ನೇರ ಮಲಗುಂಡಿಗೆ ಇಳಿಯದಂತೆ, ಮಲ ಹೊರದಂತೆ ಜಾರಿಗೆ ತಂದ ಕಾಯ್ದೆಗಳ ಯಾವ ನಿಯಮಗಳು ಪರಿಪೂರ್ಣವಾಗಿ ಇಂದಿಗೂ ಜಾರಿಗೆ ಬಂದಿಲ್ಲ ಎಂಬುದು ಸಂಸದೆ ಮುಂದಿಟ್ಟ ಕಳಕಳಿಯಾಗಿತ್ತು.

ಒದಗಿಸಿದ ದತ್ತಾಂಶಗಳ ಪ್ರಕಾರ 2017 ರಿಂದ ಇಲ್ಲಿಯವರೆಗೆ ದುರ್ಮರಣ ಹೊಂದಿದ 622 ಸಂತ್ರಸ್ತರಲ್ಲಿ 2017ರಿಂದ ಭಾರತದಲ್ಲಿ ಮಲದ ಗುಂಡಿ ಮತ್ತು ಒಳಚರಂಡಿಗಳ ಸ್ವಚ್ಛತೆಯಲ್ಲಿ ತೊಡಗಿದ್ದ ಒಟ್ಟು 622 ಕಾರ್ಮಿಕರ ಸಾವು. 539 ಕುಟುಂಬಗಳಿಗೆ ಪೂರ್ಣ ಪರಿಹಾರ ಪಾವತಿ. 25 ಕುಟುಂಬಗಳಿಗೆ ಅರೆಪರಿಹಾರ. 52 ಕುಟುಂಬಗಳಿಗೆ ಪರಿಹಾರವೇ ದೊರೆತಿಲ್ಲ. 6 ಪ್ರಕರಣಗಳನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ ಎಂದು ಇಕ್ರಾ ಹೇಳಿದ್ದಾರೆ. ಇದರಲ್ಲಿ ಉತ್ತರಪ್ರದೇಶದಲ್ಲಿ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿದ್ದು 86 ಸಾವು ಉತ್ತರಪ್ರದೇಶದಲ್ಲಿ, ಮಹಾರಾಷ್ಟ್ರ 82, ತಮಿಳುನಾಡಿನಲ್ಲಿ 77, ಹರಿಯಾಣದಲ್ಲಿ 76, ಗುಜರಾತಿನಲ್ಲಿ 73 ದೆಹಲಿಯಲ್ಲಿ 62 ಸಫಾಯಿ ಕರ್ಮಾಚಾರಿಗಳ ಸಾವು ಸಂಭವಿಸಿದೆ. ಮೃತರಿಗೆ ಪರಿಹಾರ ಒದಗಿಸುವುದರಲ್ಲೂ ಉತ್ತರಪ್ರದೇಶ ಹಿಂದೆ ಬಿದ್ದಿದೆ.

ಇದಕ್ಕೆ ಉತ್ತರಿಸಿದ ಸರ್ಕಾರ ಯೋಜನೆಯು ಯಂತ್ರಗಳನ್ನು ಬಳಸಿ ನೈರ್ಮಲ್ಯ ನಿರ್ವಹಿಸುವ ಉದ್ದೇಶದಿಂದ ಜಾರಿಗೆ ತರಲಾಗಿದ್ದು ಇದು ಸಫಾಯಿ ಕರ್ಮಾಚಾರಿಗಳು ನೇರವಾಗಿ ಮಲಗುಂಡಿಗಳಿಗೆ ಇಳಿದು ಕೈಯಿಂದ ಮಲ ಹೊರುವುದನ್ನು ನಿಷೇಧಿಸುವ ಸಲುವಾಗಿಯೇ ಜಾರಿಯಾದ ವ್ಯವಸ್ಥೆಯಾಗಿದೆ ಎಂದು ಹೇಳಿದೆ.



ಪ್ರಸ್ತುತ ಯೋಜನೆಯು ಒಳಚರಂಡಿ ಹಾಗೂ ಸೆಪ್ಟಿಕ್ ಟ್ಯಾಂಕ್ ಶುಚಿಗೊಳಿಸುವ ಕಾರ್ಮಿಕರಿಗೆ ಪುನರ್ವಸತಿ ಹಾಗೂ ಕೌಶಲ್ಯ ತರಬೇತಿ ನೀಡುವ ಆರ್ಥಿಕ ನೆರವು ಹಾಗೂ ಸುರಕ್ಷತಾ ಸಲಕರಣೆಗಳನ್ನು ಒದಗಿಸುವ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದಿದೆ ಸರ್ಕಾರ.

2025ರಲ್ಲಿ ಸಫಾಯಿ ಕರ್ಮಾಚಾರಿಗಳ ಆಯೋಗವು ವೇತನ ಪಾವತಿಸದಿರುವುದು, ಸುರಕ್ಷತಾ ಸಲಕರಣೆಗಳನ್ನು ಒದಗಿಸದಿರುವುದು ಜಾತಿ ಆಧಾರಿತ ತಾರತಮ್ಯದ ವಿರುದ್ಧ 842 ದೂರುಗಳನ್ನು ಸ್ವೀಕರಿಸಿದೆ. ದೆಹಲಿಯಲ್ಲಿ 140 ದೂರುಗಳು ದಾಖಲಾಗಿದೆ, ಉತ್ತರಪ್ರದೇಶದಲ್ಲಿ 130 ದೂರುಗಳು ದಾಖಲಾಗಿದೆ. ಯಾಂತ್ರೀಕರಣದ ಆದೇಶಗಳನ್ನು ಕಡೆಗಣಿಸುವ ಗುತ್ತಿಗೆದಾರರ ಮೇಲೆ ಹಾಗೂ ನಾಗರಿಕ ಸಂಸ್ಥೆಗಳ ಮೇಲೆ ಜರುಗಿಸಲಾದ ಕ್ರಮಗಳ ಕುರಿತ ನಿರ್ವಹಣೆ ಆಯಾ ರಾಜ್ಯದ ಕೆಲಸವಾಗಿದೆ. ಇದರಲ್ಲಿ ಕೇಂದ್ರದ ಭಾಗಿತ್ವ ಇರುವುದಿಲ್ಲ ಎಂಬ ಸರ್ಕಾರದ ಹೇಳಿಕೆ ಈವರೆಗೂ ಸರ್ಕಾರ ಸಫಾಯಿ ಕರ್ಮಾಚಾರಿಗಳ ಕ್ಷೇಮಾಭಿವೃದ್ಧಿಯ ಪರವಾಗಿ ಮಾಡಲಾಗಿದೆ ಎಂದ ಎಲ್ಲಾ ಹೇಳಿಕೆಗಳ ವಿರುದ್ಧವಾಗಿದೆ.

ಮಲಹೊರುವ ಪದ್ದತಿ ನಿಷೇಧ ಕಾಯ್ದೆ ಜಾರಿಗೆ ಬಂದು ದಶಕಗಳೇ ಕಳೆದರೂ ಭಾರತದಲ್ಲಿ ಈಗಲೂ ಕೈಯಿಂದ ಮಲಬಾಚುವ ಪದ್ಧತಿ ಹಾಗೆಯೇ ಮುಂದುವರೆದು ಬಂದಿರುವುದು ರೇಜಿಗೆಯ ವಿಷಯ. ಮಲ ಹೊರುವ ಪದ್ದತಿ ನಿಷೇಧಿಸಲು ಹಲವು ಯೋಜನೆಗಳನ್ನು ರೂಪಿಸಲಾಗಿದೆ ಎಂದು ಸಮರ್ಥಿಸಿಕೊಂಡ ಕೇಂದ್ರ ಸರ್ಕಾರ ಯೋಜನೆ ಎಷ್ಟರ ಮಟ್ಟಿಗೆ ಅನ್ವಯವಾಗಿದೆ ಎಂಬುದು ತನ್ನ ವ್ಯಾಪ್ತಿಗೆ ಒಳಪಡುವ ವಿಷಯವಲ್ಲ ಎಂದು ರಾಜ್ಯಗಳ ಪಾಲಿಗೆ ಬಿಟ್ಟಿರುವುದು ನ್ಯಾಯ ಸಮ್ಮತವಲ್ಲ.

ಇಂದಿಗೂ ರೈಲ್ವೇ ಹಳಿಯ ಮಲ ತ್ಯಾಜ್ಯ ಬಾಚಲು ಸರ್ಕಾರ ಸಫಾಯಿ ಕರ್ಮಾಚಾರಿಗಳನ್ನೇ ನೇಮಿಸಿದೆ, ಅವರಿಗೆ ಸರಿಯಾದ ಸಂರಕ್ಷಾ ಸಲಕರಣೆಗಳನ್ನು ಒದಗಿಸದೆ ಅವರ ಆರೋಗ್ಯ ಹಾಗೂ ಘನತೆಯ ಜೊತೆಗೆ ಚೆಲ್ಲಾಟವಾಡುತ್ತಿದೆ. ಸಾಲದಾಗಿ ನಮ್ಮ ಸಮಾಜ ಜಾತಿ ಮತ್ತು ವೃತ್ತಿ ಆಧರಿಸಿ ಮಾನಸಿಕವಾಗಿ ದೈಹಿಕವಾಗಿ ಕರ್ಮಾಚಾರಿ ವರ್ಗವನ್ನು ಶೋಷಣೆಗೆ ಒಳಮಾಡಿದೆ. ''ಸರ್ಕಾರ ಸಫಾಯಿ ಕೆಲಸವನ್ನು ಒಂದು ವೃತ್ತಿಯಾಗಿ ಕಾಣೆ, ಜಾತಿಯಾಗಿ ಅಲ್ಲ'' ಎಂದು ಹೇಳಿಕೆ ನೀಡಿದೆ. ಆದರೆ ವಾಸ್ತವದಲ್ಲಿ ಮಲಹೊರುವವರು ಪೌರ ಕಾರ್ಮಿಕರು ತಲತಲಾಂತರದಿಂದಲೂ ಜಾತಿಯಾಧರಿಸಿಯೇ ಈ ಕೆಲಸಕ್ಕೆ ನೂಕಲ್ಪಟ್ಟವರು.

ರುದ್ರನೆಂಬರು, ಶಿವನೆಂಬರು ಎನ್ನ ಹೇಸುವರು, ಅಂಜುವರು ಜಲಗಾರನೆನಲು ಕುವೆಂಪು ಬರೆದ ಜಲಗಾರ ನಾಟಕದ ಸಾಲುಗಳಿವು. ಇಂದಿಗೂ ನಮ್ಮ ಸಮಾಜದ ವಾಸ್ತವತೆ ಹೀಗೆ ಇದೇ ಸಫಾಯಿ ಕರ್ಮಾಚಾರಿಗಳು ಕಾರ್ಯ ನಿರ್ವಹಿಸುವಾಗ ಮಲಗುಂಡಿಗಳಲ್ಲಿ ಕಾಲುಜಾರಿ ಬಿದ್ದು ಪ್ರಾಣ ಕಳೆದುಕೊಂಡರು. ಸರ್ಕಾರ ಇಷ್ಟು ಮೊತ್ತದ ಪರಿಹಾರ ಘೋಷಿಸಿದೆ ಎಂಬ ಸುದ್ದಿ ಮಾಮೂಲಾಗಿ ಹೋಗಿದೆ. ವ್ಯವಸ್ಥೆಯ ನಿರ್ಲಕ್ಷ್ಯದಿಂದ ಹೋದ ಜೀವಗಳು ಕಳೆದ ಘನತೆಯ ಬದುಕು ಯಾವ ಸರ್ಕಾರದ ಪರಿಹಾರ ಧನದಿಂದಲೂ ಸಿಗಲಾರದು. ಬದಲಿಗೆ ಅವರು ಸಫಾಯಿ ಕಾರ್ಯದಲ್ಲಿ ತೊಡಗುವಾಗ ಅಗತ್ಯವಿರುವ ಮುನ್ನೆಚ್ಚರಿಕ ಕ್ರಮಗಳನ್ನು, ಸುರಕ್ಷತ ಕ್ರಮಗಳನ್ನು ರೂಪಿಸುವ ಜವಾಬ್ದಾರಿ ಸರ್ಕಾರ ತೆಗೆದುಕೊಳ್ಳಬೇಕು. ಭೂಮಿಯಿಂದ ಚಂದ್ರ, ಮಂಗಳನ ಅಂಗಳದವರೆಗೂ ಜಿಗಿಯಲು ತಂತ್ರಜ್ಞಾನ ಬಳಕೆಯಾಗುತ್ತಿರುವಾಗ, ಒಳಚರಂಡಿಗಳ, ಮಲಗುಂಡಿಗಳ ನಿರ್ವಹಣೆಗೆ ಸಾರ್ವಜನಿಕ ವಲಯದ ನೈರ್ಮಲ್ಯ ವೃದ್ದಿಗೆ ಬೇಕಾದ ತಂತ್ರಜ್ಞಾನ ಯಾಂತ್ರಿಕ ಉಪಕರಣ ಲಭ್ಯವಿಲ್ಲದೇ ಇರುವುದು ಈ ದೇಶ ಒಂದು ನಿರ್ದಿಷ್ಟ ಸಮುದಾಯದ ಕುರಿತು ತಳೆದಿರುವ ನಿರ್ಲಕ್ಷ್ಯಕ್ಕೆ ಸಾಕ್ಷಿ.

ಚುಕ್ಕಿ ಸೂಗಪ್ಪ ನೇತೃತ್ವದಲ್ಲಿ ರಂಜಾನ್ ಹಬ್ಬದ ಶುಭಾಶಯ ವಿನಿಮಯ

ಸಿರವಾರ,ಮಾ21-

ಮುಸ್ಲಿಂರ ಪವಿತ್ರ ಹಬ್ಬ ರಂಜಾನ್ ಹಬ್ಬದ ಅಂಗವಾಗಿ ಕಾಂಗ್ರೇಸ್ ಹಿರಿಯ ಮುಖಂಡರಾದ ಚುಕ್ಕಿ ಸೂಗಪ್ಪ ಸಾಹುಕಾರ ವಿಶ್ವಲಾಡ್ಜ್ ನಲ್ಲಿ ಮುಸ್ಲಿಂರಿಗೆ ಶುಭಾಷಯ ತಿಳಿಸಿದರು. ಈ ಸಂದರ್ಭದಲ್ಲಿ ಜಿ.ಪಂ ಮಾಜಿ ಸದಸ್ಯ ಕೆ.ಅಸ್ಲಾಂ ಪಾಷ, ಪ.ಪಂಚಾಯತಿ ಅದ್ಯಕ್ಷ ಹಾಜಿಚೌದ್ರಿ, ಮಾಜಿ ಅದ್ಯಕ್ಷವೈ.ಭೂಪನಗೌಡ, ಸದಸ್ಯರಾದ ಮೌಲಾಸಾಬ ವರ್ಚಸ್, ಹಸೇನ ಅಲಿಸಾಬ್,ಮಾರ್ಕಪ್ಪ ಶಾಬೂದ್ದಿನ್, ರಾಜ ಮಹಮ್ಮದ್, ಜಿ.ವಿರೇಶ,ಕಲ್ಲೂರು ಬಸವರಾಜ ನಾಯಕ, ಎನ್.ಚಂದ್ರಶೇಖರ,


ಬಸವರಾಜ ದಳಪತಿ,ನಾಗರಾಜ ಚಿನ್ನಾನ್, ನಾಗಪ್ಪ ಪತ್ತಾರ,ಚನ್ನಪ್ಪ ಗಡ್ಲ, ಬಡ್ಡ ಹನುಮಂತ,ರಂಗಪ್ಪ, ಮಲ್ಲಪ್ಪ, ಸವಾರೆಪ್ಪ, ಮನೋಹರ್ ಚಂದ್ರಶೇಖರ ಹಡಪದ್, ರಂಗನಾಥ, ಇನ್ನಿತರರು ಇದರು.





ಸಿರವಾರ ಪಟ್ಟಣದ ವಾರ್ಡ ನಂ8 ರ ಸದಸ್ಯರಾದ ಹೆಚ್ ಮಾರ್ಕಪ್ಪ ಅವರು ರಾಜ್ಯ ಸರ್ಕಾರದ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್ ಬೋಸರಾಜು ಹಾಗೂ ಮಾನ್ವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯನಾಯಕ (ಎನ್.ಎಸ್.ಬೋಸರಾಜು ಪೌಂಡೇಶನ್) ಅವರು ರಂಜಾನ್ ಹಬ್ಬದ ಅಂಗವಾಗಿ ಆಹಾರ ಕೀಟ್ ವಿತರಣೆ ಮಾಡಿದರೆ,

ಬಿ.ಗಣೇಕಲ್ ನಲ್ಲಿ ರಂಜಾನ್ ಹಬ್ಬ ಆಚರಣೆ



ಅರಕೇರಾ,ಮಾ.21-

ತಾಲೂಕಿನ ಬಿ.ಗಣೇಕಲ್ ಗ್ರಾಮದಲ್ಲಿ ಇಂದು ತ್ಯಾಗ ಮತ್ತು ಶಾಂತಿಯ ಸೌಹಾರ್ದತೆಯ ಪ್ರತಿಕ,ಸಹೋದರತೆ ಸಮಾನತೆ ಪರೋಪಕಾರ ಸಂದೇಶ ಸಾರುವ ಮುಸ್ಲಿಂ ಬಾಂಧವರ ಪವಿತ್ರ ಹಬ್ಬವಾದ ರಂಜಾನ ಹಬ್ಬವನ್ನು ಇಂದು ಬಿ.ಗಣೇಕಲ್ ನ ಮುಸ್ಲಿಂ ಸಮುದಾಯದವರು ಅತ್ಯಂತ ವಿಜೃಂಬಣೆಯಿಂದ ಆಚರಿಸಿದರು.

ಮುಂಜಾನೆ ಕೇಂದ್ರ ಸ್ಥಾನ ಮಸೀದಿಯಿಂದ ಪ್ರಮುಖ ಬೀದಿಗಳಲ್ಲಿ ಧರ್ಮ ಪಠಣ ಗೀತೆಗಳನ್ನು ಜಪ ಮಾಡುತ್ತಾ ಕಾಲ್ನಡಿಗೆ ಮುಖಾಂತರ ಈದ್ಗಾವರೆಗೆ ತಲುಪಿದರು ನಂತರ ಎಲ್ಲಾ ಮುಸ್ಲಿಂ ಬಾಂಧವರಿಗೆ ಮೌಲ್ವಿಯವರಿಂದ ರಂಜಾನ್ ಹಬ್ಬವು ಮುಸ್ಲಿಮರಿಗೆ ಬದುಕಿನ ಅನೇಕ ಪಾಠಗಳನ್ನು ಕಲಿಸಿಕೊಡುತ್ತದೆ ದೇಹವನ್ನು ಹಸಿವಿಗೆ ಒಳಪಡಿಸಿ ಗೆಲ್ಲುವುದು ಇದರಿಂದ ಹಸಿವಿಗೆ ಒಳಗಾಗುವ ಬಡವರ ಸಂಕಟಗಳನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ಈ ರಂಜಾನ್ ತಿಂಗಳಲ್ಲಿ ಉಪವಾಸ ಕೈಗೊಳ್ಳುವುದರ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಇದರೊಂದಿಗೆ ದುಂದು ವೆಚ್ಚಕ್ಕೆ ಕಡಿವಾಣ ಹಾಕುವುದು ಕೆಟ್ಟ ವಿಚಾರಗಳನ್ನು ಕೆಟ್ಟ ಕೆಲಸಗಳನ್ನು ಮಾಡದಿರುವುದು ಅದೇ ರೀತಿ ನಮ್ಮ ಸುತ್ತಮುತ್ತಲೂ ಇರುವ ಎಲ್ಲ ಸರ್ವ ಧರ್ಮದ ಜನಾಂಗವನ್ನು ಸಹೋದರತ್ವದ ಭಾವನೆಯಿಂದ ಕಾಣುವುದು. ಮಾನವೀಯ ಮೌಲ್ಯಗಳನ್ನು ಬದುಕಿನುದ್ದಕ್ಕೂ ಅಳವಡಿಸಿಕೊಂಡು ಸಾಗುವುದು ರಂಜಾನ್ ಹಬ್ಬದ ಪ್ರಧಾನ ತಿರುಳಾಗಿದೆ ಎಂದು ಧರ್ಮ ಭೋಧಕರಾದ ಎಂ.ಡಿ ಮಸೂದ್ ಭೋಧನೆ ನೀಡಿದರು.

ಎಐ ಬಳಕೆ ನ್ಯಾಯದಾನ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ: ಸಿಜೆಐ ಸೂರ್ಯಕಾಂತ್ ಅಭಿಮತ

ಬೆಂಗಳೂರು: ಕೃತಕ ಬುದ್ಧಿಮತ್ತೆಯು ನ್ಯಾಯದಾನದಲ್ಲಿ ಪ್ರಮುಖ ಪಾತ್ರ ವಹಿಸಲಿದ್ದು, ಕಕ್ಷಿದಾರರಿಗೆ ಅರ್ಜಿ ಸಲ್ಲಿಸಿದ ದಿನದಿಂದ ಅದರ ಅಂತಿಮ ಆದೇಶ ಹೊರ ಬೀಳುವರೆಗೂ ಎಲ್ಲ ಹಂತದ ಪ್ರಕ್ರಿಯೆಗಳ ಕುರಿತು ವಿವರಣೆ ನೀಡಲಿದೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ತಿಳಿಸಿದ್ದಾರೆ.

ಕರ್ನಾಟಕ ನ್ಯಾಯಾಂಗ ಅಕಾಡೆಮಿಯು ವತಿಯಿಂದ ನಗರದಲ್ಲಿ ಹಮ್ಮಿಕೊಂಡಿದ್ದ ಕೃತಕ ಬುದ್ಧಿಮತ್ತೆ(ಎಐ)ಯಿಂದ - ವಿವಾದಗಳ ತಡೆಗಟ್ಟುವಿಕೆ ಮತ್ತು ಪರಿಹಾರ ಕುರಿತು ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

ಕಾನೂನುಗಳು, ನಿಯಮಗಳು ಮತ್ತು ಕಾನೂನು ಕಾರ್ಯವಿದಾನಗಳು ಕಾಲಕ್ರಮೇಣ ಬದಲಾಗಬಹುದು. ಆದರೆ, ನ್ಯಾಯದ ಕಲ್ಪನೆಯು ಸ್ಥಿರವಾಗಿರುತ್ತದೆ ಮತ್ತು ಕಾನೂನು ವ್ಯವಸ್ಥೆಯ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತದೆ. ಕೃತಕ ಬುದ್ಧಿಮತ್ತೆ ನ್ಯಾಯ ವ್ಯವಸ್ಥೆಯನ್ನು ಬೆಂಬಲಿಸಬಹುದು, ಆದರೆ ಕಾನೂನನ್ನು ಅರ್ಥೈಸುವ ಮತ್ತು ನ್ಯಾಯವನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಯಾವಾಗಲೂ ಮಾನವ ನ್ಯಾಯಮೂರ್ತಿಗಳದ್ದಾಗಿದೆ ಎಂದು ಹೇಳಿದರು.

ತಂತ್ರಜ್ಞಾನವು ನ್ಯಾಯಾಧೀಶರು, ನ್ಯಾಯಮೂರ್ತಿಗಳಿಗೆ ಮತ್ತು ವಕೀಲರಿಗೆ ಮಾತ್ರವಲ್ಲದೇ ನ್ಯಾಯವನ್ನು ಬಯಸುವ ಸಾಮಾನ್ಯ ನಾಗರಿಕರಿಗೂ ನ್ಯಾಯಾಲಯದ ಪ್ರಕ್ರಿಯೆಗಳನ್ನು ವೇಗವಾಗಿ ಮತ್ತು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡಿದೆ. ಈ ಅನುಕೂಲಗಳ ಹೊರತಾಗಿಯೂ, ನ್ಯಾಯಾಂಗ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಕೃತಕ ಬುದ್ಧಿಮತ್ತೆಯ ಮೇಲೆ ಅತಿಯಾದ ಅವಲಂಬನೆ ಸಾಧ್ಯವಿಲ್ಲ. ಕಾನೂನು ಸಂಶೋಧನೆ, ದೊಡ್ಡ ಪ್ರಮಾಣದ ಡೇಟಾವನ್ನು ವಿಶ್ಲೇಷಿಸುವುದು ಮತ್ತು ನ್ಯಾಯಾಲಯಗಳಲ್ಲಿ ಆಡಳಿತಾತ್ಮಕ ಕೆಲಸವನ್ನು ಬೆಂಬಲಿಸುವಂತಹ ಕಾರ್ಯಗಳಿಗೆ ಬಹಳ ಉಪಯುಕ್ತವಾಗಬಹುದು.

ಸಾಮಾಜಿಕ ಬದಲಾವಣೆಗಳು, ತಾಂತ್ರಿಕ ಪ್ರಗತಿ ಮತ್ತು ಜನರ ಅಗತ್ಯಗಳಿಗೆ ಪ್ರತಿಕ್ರಿಯೆಯಾಗಿ ನಿರಂತರವಾಗಿ ವಿಕಸನಗೊಳ್ಳುತ್ತದೆ. ಆಧುನಿಕ ಕಾಲದಲ್ಲಿ, ನ್ಯಾಯಾಲಯಗಳು ಸಾಂಪ್ರದಾಯಿಕ ಕಾಗದ ಆಧಾರಿತ ಪ್ರಕ್ರಿಯೆಗಳಿಂದ ಡಿಜಿಟಲ್ ವೇದಿಕೆಗಳು ಮತ್ತು ತಂತ್ರಜ್ಞಾನ-ಚಾಲಿತ ವ್ಯವಸ್ಥೆಗಳಿಗೆ ಹೆಚ್ಚು ಹೆಚ್ಚು ಚಲಿಸುತ್ತಿರುವುದರಿಂದ ಕಾನೂನು ವ್ಯವಸ್ಥೆಯು ಮತ್ತೊಂದು ಪ್ರಮುಖ ಪರಿವರ್ತನೆಯಾಗಿದೆ.

ಎಲೆಕ್ಟ್ರಾನಿಕ್ ಫೈಲಿಂಗ್ ವ್ಯವಸ್ಥೆಗಳು, ಡಿಜಿಟಲ್ ಕೇಸ್ ನಿರ್ವಹಣೆ ಮತ್ತು ನ್ಯಾಯಾಲಯದ ದತ್ತಾಂಶಕ್ಕೆ ಸಾರ್ವಜನಿಕ ಪ್ರವೇಶವನ್ನು ಸುಧಾರಿಸಿವೆ, ಇದರಿಂದ ನ್ಯಾಯಾಂಗ ಆಡಳಿತದಲ್ಲಿ ಪಾರದರ್ಶಕತೆ ಮತ್ತು ದಕ್ಷ ಕಾಣಬಹುದಾಗಿದೆ. ನ್ಯಾಯಾಲಯಗಳು ಕೇವಲ ನಿಯಮಗಳನ್ನು ಅನ್ವಯಿಸುವುದಿಲ್ಲ. ಅವು ನಿಜ ಜೀವನದ ಸನ್ನಿವೇಶಗಳು ಮತ್ತು ಮಾನವ ಅನುಭವಗಳ ಸಂದರ್ಭದಲ್ಲಿ ಕಾನೂನುಗಳನ್ನು ವ್ಯಾಖ್ಯಾನಿಸುತ್ತವೆ. ಆದ್ದರಿಂದ ಕೃತಕ ಬುದ್ದಿ ಮತ್ತೆ ಎಷ್ಟು ಪರಿಣಾಮಕಾರಿಯಾಗಿ ಬಳಕೆ ಮಾಡಿದರೂ ಅಂತಿಮ ಆದೇಶ ನೀಡುವಲ್ಲಿ ಮಾನವ ನ್ಯಾಯಾಧೀಶರ ಅತ್ಯಗತ್ಯ ಹೆಚ್ಚಾಗಿರಲಿದೆ ಎಂದು ಹೇಳಿದರು.

ಭೂಮಾಪಕರಿಂದ ಶಾಸಕರಿಗೆ ಮನವಿ ಸದನದಲ್ಲಿ ಧ್ವನಿ ಎತ್ತುವ ಭರವಸೆ ನೀಡಿದ ಶಾಸಕಿ ಕರೆಮ್ಮ ಜಿ ನಾಯಕ್

ದೇವದುರ್ಗ,ಮಾ 21-

ಕಲ್ಯಾಣ ಅಸ್ತ್ರ :

ತಾಲ್ಲೂಕಿನ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಇಂದು ದೇವದುರ್ಗ ತಾಲ್ಲೂಕು ಭೂಮಾಪಕರ ಸಂಘದ ವತಿಯಿಂದಜನಪ್ರಿಯ ಶಾಸಕರಾದ ಶ್ರೀಮತಿ ಕರಿಯಮ್ಮ ಜಿ. ನಾಯಕ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.ತಾಲ್ಲೂಕಿನ ಅಭಿವೃದ್ಧಿ ಹಾಗೂ ಭೂಮಾಪಕರ ವೃತ್ತಿ ಬದುಕಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳನ್ನು ಶಾಸಕರ ಗಮನಕ್ಕೆ ತಂದ ಸಂಘದ ಪದಾಧಿಕಾರಿಗಳು, ಈ



ಕುರಿತು ಸರ್ಕಾರ ಮಟ್ಟದಲ್ಲಿ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಶಾಸಕರ ಭರವಸೆ:

ಮನವಿ ಸ್ವೀಕರಿಸಿ ಮಾತನಾಡಿದ ಶಾಸಕರು, ನಿಮ್ಮ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಲಾಗುವುದು. ಮುಂಬರುವ ಅಧಿವೇಶನದಲ್ಲಿ ನಿಮ್ಮ ಪರವಾಗಿ ರಾಜ್ಯಾದ್ಯಂತ ಗಟ್ಟಿ ಧ್ವನಿಯಾಗಿ ನಾನು ಮಾತನಾಡುತ್ತೇನೆ ಮತ್ತು ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕದ ಪ್ರಧಾನ ಕಾರ್ಯ ದರ್ಶಿಗಳಾದ ಆನಂದ ಸಿ., ರಾಯಚೂರು ಜಿಲ್ಲಾ ಕಾರ್ಯ ದರ್ಶಿಗಳಾದ ರಾಘವೇಂದ್ರ, ಸೇರಿದಂತೆ ಸಂಘದ ಪ್ರಮುಖರು ತಾಲೂಕು ಅಧ್ಯಕ್ಷ ರಾಜು ಚವಾಣ್ ಸಾಬಣ್ಣ ಸಿಂಹ ಕರಣ ಕುಮಾರ್ ಪಾಟೀಲ್ ರಾಜು ಭವಾನಿ ಸುರೇಶ್ ಭವಾನಿ ದೇವಿ ದಾಸ ಮಜುನಾಥ ಗುರುಗುಂಟ ವಿನೋದ್ ಮಸರಕಲ್ ಮಲ್ಲಿಕಾರ್ಜುನ ಮಾನ್ವಿ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR